

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 13 ಸಂಚಿಕೆ : 2 ಪುಟ 8 ಸುತ್ತೂರು ಶ್ರೀಕ್ಷೇತ್ರ ಶನಿವಾರ, 2 ಫೆಬ್ರವರಿ 2019

## ಯಾತ್ರೆಯಾದ ಜಾತ್ರೆ


**ಸುತ್ತೂರು ಶ್ರೀಕ್ಷೇತ್ರ :** ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವಕ್ಕೆ ಶುಕ್ರವಾರ ಬೆಳಗ್ಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು.

ವಸ್ತು ಪ್ರದರ್ಶನ, ಕೃಷಿ ಮೇಳ ಮತ್ತು ಸಾಂಸ್ಕೃತಿಕ ಮೇಳಗಳಲ್ಲದೆ ದೇಸಿ ಆಟಗಳು, ದೋಣಿ ವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆಗಳನ್ನು ವಿವಿಧ ಮಠಾಧೀಶರು, ಹರಗುರುಚರಮೂರ್ತಿಗಳು, ಮಂತ್ರಿಮಹೋದಯರು ಹಾಗೂ ಗಣ್ಯರು ಉದ್ಘಾಟಿಸಿದರು.

## ಬೇರಿನಂತೆ ಮರ : ಶ್ರೀ ಡಿ.ಸಿ. ತಮ್ಮಣ್ಣ

ಜನಪದ ಕಲೆಯು ಎಲ್ಲಾ ಕಲೆಗಳಿಗೂ ತಾಯಿ ಬೇರು ಇದನ್ನು ಉಳಿಸಿ ಬೆಳೆಸುವ ಹೊಣೆ ನಮ್ಮದಾಗಿದೆ ಎಂದು ಸಾರಿಗೆ ಸಚಿವರಾದ ಶ್ರೀ ಡಿ. ಸಿ. ತಮ್ಮಣ್ಣನವರು ಹೇಳಿದರು.

ದೇಸಿ ಆಟಗಳು, ದೋಣಿ ವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು ನಾಡಿನಾದ್ಯಂತ ಮಠಗಳು ಅನೇಕ ಸಮಾಜಪರವಾದ ಕಾರ್ಯಗಳನ್ನು ಮಾಡುತ್ತಿವೆ. ಸುತ್ತೂರು ಶ್ರೀಮಠವೂ ಕೂಡ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದೆ. ಸುತ್ತೂರು ಶ್ರೀಕ್ಷೇತ್ರದಲ್ಲಿ ಸಾವಿರಾರು ಮಕ್ಕಳಿಗೆ ಅನ್ನ, **7ನೇ ಪುಟಕ್ಕೆ**



**ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ**

## ಜಾತ್ರೆಗೂ ಮಾದರಿ ಸುತ್ತೂರು ಆದಿಚುಂಚನಗಿರಿ ಶ್ರೀ ಬಣ್ಣನೆ...



ಸುತ್ತೂರು ಜಾತ್ರೆಯು ಆಧುನಿಕ ಯುಗಕ್ಕೆ ಬೇಕಾಗಿರುವ ರೀತಿಯಲ್ಲಿ ಒಂದು ಜಾತ್ರೆಯನ್ನು ಹೇಗೆ ನಡೆಸಬೇಕೆಂಬುದನ್ನು ಮಾದರಿಯಾಗಿ ತೋರಿಸಿಕೊಟ್ಟಿದೆ ಎಂದು ಆದಿಚುಂಚನಗಿರಿ ಕ್ಷೇತ್ರದ ಪೀಠಾಧಿಪತಿಗಳಾದ ಜಗದ್ಗುರು ಡಾ. ನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರು ಬಣ್ಣಿಸಿದರು.

ಸುತ್ತೂರು ಜಾತ್ರಾ ಮಹೋತ್ಸವದ ವಸ್ತುಪ್ರದರ್ಶನ, ಕೃಷಿ ಮೇಳ ಮತ್ತು ಸಾಂಸ್ಕೃತಿಕ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಸಮ್ಮುಖ ವಹಿಸಿ ಆಶೀರ್ವಚನ ನೀಡಿದ ಅವರು ಸಾಮಾನ್ಯ ವಾಗಿ ಜಾತ್ರೆಗಳು ಭಕ್ತಿ ಮತ್ತು ಭಜನೆಗಳಿಗೆ ಮಾತ್ರ ಸೀಮಿತ ವಾಗಿದ್ದವು. ಮಠಗಳು, ಅಧ್ಯಾತ್ಮಿಕ, ಧಾರ್ಮಿಕ ಕೇಂದ್ರಗಳು, ಆಧುನಿಕ ಜಗತ್ತಿಗೆ ಬೇಕಾಗಿರುವ ಭಕ್ತಿ, ಶ್ರದ್ಧೆ, ಆಧ್ಯಾತ್ಮಿಕತೆ ಯನ್ನು ಬೋಧಿಸುವಲ್ಲಿ ಪ್ರಯತ್ನಪಡುತ್ತಿವೆ. ಜನರ ಮನಸ್ಸಿಗೆ ಸರಿಯಾದ ಸಂಸ್ಕಾರ ಸಿಕ್ಕಿದರೆ **2ನೇ ಪುಟಕ್ಕೆ**




**ಶುಕ್ರವಾರ ಜಾತ್ರಾ ಮಹೋತ್ಸವದಲ್ಲಿ ವಸ್ತು ಪ್ರದರ್ಶನ, ಕೃಷಿ ಮೇಳ ಮತ್ತು ಸಾಂಸ್ಕೃತಿಕ ಮೇಳಗಳನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಚಿತ್ರದಲ್ಲಿ ಶ್ರೀ ಹೆಚ್.ಎಸ್. ಸೋಮಶೇಖರ್, ಶ್ರೀ ಎಸ್.ಎ. ಚಿನ್ನೇಗೌಡ, ಡಾ. ಸಿದ್ದಯ್ಯ, ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಶ್ರೀ ವಾಸು, ಶ್ರೀಮತಿ ಶೀಲಾ ರಾಜಶೇಖರ್, ಡಾ. ಕವಿತಾ ಕೊಟ್ರಪ್ಪ ಮತ್ತು ಡಾ. ವಿಜಯ ಕೊಟ್ರಪ್ಪ ಅವರುಗಳಿದ್ದಾರೆ.**

## 'ಸಮಾಜಮುಖಿ ಸೇವೆ'



ಸುತ್ತೂರು ಮಠ ಇಂದಿಗೂ ಎಂದೆಂದಿಗೂ ಸಮಾಜ ಮುಖಿ ಕಾರ್ಯಗಳನ್ನು ನಡೆಸುತ್ತಿದೆ ಎಂದು ಬೃಹತ್ ಬೆಂಗಳೂರು ಮಹಾ ನಗರಪಾಲಿಕೆಯ ಮಹಾಪೌರರಾದ **ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನವರು** ಅಭಿಪ್ರಾಯಪಟ್ಟರು.

ವಸ್ತು ಪ್ರದರ್ಶನ, ಕೃಷಿ ಮೇಳ ಮತ್ತು ಸಾಂಸ್ಕೃತಿಕ ಮೇಳದ ಉದ್ಘಾಟನೆ ಸಮಾರಂಭದಲ್ಲಿ ಭಾಗ ವಹಿಸಿ ಈ ಜಾತ್ರೆಯಲ್ಲಿ ಬರುವ ಭಕ್ತಾದಿಗಳಿಗೆ ಅನ್ನ ದಾಸೋಹ, ಅಕ್ಷರ ದಾಸೋಹ ನೀಡುವ ಸಲುವಾಗಿ ಉತ್ತಮ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದಾರೆ, ನಿಮ್ಮ ಮಕ್ಕಳಿಗೆ ಸಂಸ್ಕಾರ ಶಿಸ್ತು ಕಲಿಸಬೇಕೆಂದರೆ ನಿಮ್ಮ ಮಕ್ಕಳನ್ನು ಸುತ್ತೂರು ಮಠದ ಶಾಲೆಗೆ ಒಂದು ವರ್ಷವಾದರೂ ಸೇರಿಸಿ, ಇಲ್ಲಿಯವರೆಗೆ ಸುತ್ತೂರು ಮಠದ ಶಾಲೆಯಲ್ಲಿ ಓದಿರುವ ಮಕ್ಕಳು ಬೇರೆ ಬೇರೆ ಹುದ್ದೆಗಳಿಗೆ ಸೇರಿದ್ದಾರೆ. ಒಳ್ಳೆಯ ಜ್ಞಾನ ಪಡೆದು ಒಳ್ಳೆಯ ಮನಸ್ಸುಳ್ಳವರಾಗಿದ್ದಾರೆ. ಮಕ್ಕಳಿಗೆ ಒಳ್ಳೆಯ ಜ್ಞಾನ, ಸಂಸ್ಕೃತಿ, ಉತ್ತಮ ಶಿಕ್ಷಣ ಬೇಕೆಂದರೆ ಸುತ್ತೂರಿನಂತಹ ಮಠಕ್ಕೆ ಸೇರಿಸಬೇಕು ಎಂದು ಹೇಳಿದರು. **–ಮಾನಸ ಬಿ**

### ಸಾಂಸ್ಕೃತಿಕ ಮೇಳದಲ್ಲಿ ನೃತ್ಯ ವೈಭವ



## ಕಳೆದ ಜಾತ್ರೆಯಲ್ಲಿ 143.... ಈ ಬಾರಿ ....?!

ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಕಳೆದ 18 ವರ್ಷ ಗಳಿಂದ ಸಾಮೂಹಿಕ ವಿವಾಹ ವನ್ನು ನಡೆಸಿಕೊಂಡು ಬರಲಾಗು ತ್ತಿದೆ. ಈ ಕಾರ್ಯಕ್ರಮದಲ್ಲಿ ಇದುವರೆಗೆ 2607ಕ್ಕೂ ಹೆಚ್ಚು ಜೋಡಿ ವಧುವರರು ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದಾರೆ. ಯಾವುದೇ ಜಾತಿಧರ್ಮ ಮತ್ತು ಬೇಧವಿಲ್ಲದೆ ಇದರಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಮುಕ್ತ ಅವಕಾಶವಿದೆ. ವಿವಾಹ ಸಂದರ್ಭದಲ್ಲಿ ವರನಿಗೆ ಪಂಚೆ, ಶರ್ಟ್, ವಲ್ಲಿ ಹಾಗೂ ವಧುವಿಗೆ ಸೀರೆ, ರವಿಕೆ, ಮಾಂಗಲ್ಯ, ಕಾಲುಂಗರ ಗಳನ್ನು ನೀಡಲಾಗುವುದು. ಪ್ರತಿ ವರ್ಷದಂತೆ ಈ ವರ್ಷವೂ ಜಾತ್ರಾ ಮಹೋತ್ಸವದಲ್ಲಿ ಸಾಮೂಹಿಕ ವಿವಾಹವನ್ನು **2ನೇ ಪುಟಕ್ಕೆ**

### ಇಂದು ಸಾಮೂಹಿಕ ವಿವಾಹ



**ಶುಕ್ರವಾರ ಸಂಜೆ ಕಪಿಲಾ ನದಿ ತೀರದಲ್ಲಿ ದೋಣಿ ವಿಹಾರಕ್ಕೆ ಮಾಜಿ ಸಚಿವೆ ಶ್ರೀಮತಿ ಗೀತಾ ಮಹದೇವಪ್ರಸಾದ್ ಚಾಲನೆ ನೀಡಿದರು. ಚಿತ್ರದಲ್ಲಿ ಶ್ರೀ ಎನ್. ಮಹೇಶ್, ಶ್ರೀ ಮಹಿಮಾ ಪಟೇಲ್, ಶ್ರೀ ಅಲ್ಲಂ ವೀರಭದ್ರಪ್ಪ ಮೊದಲಾದವರಿದ್ದಾರೆ.**

# ಬಸವಣ್ಣನವರ ಬದುಕು ಎಲ್ಲರಿಗೂ ಆದರ್ಶ

ಜಾತ್ರಾ ಮಹೋತ್ಸವದ ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳ ಉದ್ಘಾಟನಾ ಸಮಾರಂಭದ ಸಮ್ಮುಖ ವಹಿಸಿದ್ದ ತಿರುವನಂತಪುರದ ವರ್ಕಲ್‌ನ ಶ್ರೀ ಶಿವಗಿರಿ ಮಠದ ಮಠಾಧ್ಯಕ್ಷರಾದ ಶ್ರೀ ಸ್ವಾಮಿ ಶಿವಸ್ವರೂಪಾನಂದಜಿರವರು ಶಿವಸಂದೇಶ ನೀಡಿ "ಕೈಯಲ್ಲಿ ಬೆಳಕು ಇದ್ದಾಗ ಹೇಗೆ ಕತ್ತಲು ಕಾಣುವುದಿಲ್ಲವೋ ಹಾಗೆ ಬಸವೇಶ್ವರರು ತಮ್ಮ ಜೀವನದಲ್ಲಿ ಬೆಳಕನ್ನು ಮಾತ್ರ ಪಸರಿಸಿದರು ಎಂದು ಬಸವೇಶ್ವರರ ವ್ಯಕ್ತಿತ್ವ ಮತ್ತು ಮೌಲ್ಯಯುತ ಜೀವನವನ್ನು ಬಣ್ಣಿಸಿದರು. ಕರ್ನಾಟಕದಲ್ಲಿ ಶವಸಂಸ್ಕಾರದಲ್ಲಿದ್ದ ಬಹುಭಾಗದ ಜನತೆಯನ್ನು ಶಿವಸಂಸ್ಕಾರದ ಕಡೆಗೆ ಕೊಂಡೊಯ್ದಿದ್ದು ಜಗದ್ಗುರು ಬಸವೇಶ್ವರರು ಎಂದು ಹೇಳಿದರು.

ಸುತ್ತೂರು ಶ್ರೀಮಠವು ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ನೀಡಿ ಅವರನ್ನು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುತ್ತಿದೆ, ಸುತ್ತೂರು ಶ್ರೀಮಠದ ಕಾರ್ಯ ಶ್ಲಾಘನೀಯ ಎಂದು ಹೇಳಿದರು. - ಸುನೀತಾ ಸಿ.ಕೆ.



ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಆಯೋಜನೆಗೊಂಡ ರಂಗೋಲಿ ಸ್ಪರ್ಧೆಯಲ್ಲಿ ತಮ್ಮ ಕರಕೌಶಲ್ಯವನ್ನು ಬಿಡಿಸುತ್ತಿರುವ ಸ್ಪರ್ಧಿಗಳು.

## ಸಾಂಸ್ಕೃತಿಕ ಮೇಳದ ಫಲಿತಾಂಶ

**ಗ್ರಾಮೀಣ ಪ್ರೌಢಶಾಲಾ ವಿಭಾಗ**

ಸಮೂಹ ನೃತ್ಯದಲ್ಲಿ ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆ ಪ್ರಥಮ, ಹುಲ್ಲಹಳ್ಳಿಯ ಜೆಎಸ್‌ಎಸ್ ಪ್ರೌಢ ಶಾಲೆ (ಕನ್ನಡ ಮಾಧ್ಯಮ) ದ್ವಿತೀಯ, ಪಡಗೂರಿನ ಜೆಎಸ್‌ಎಸ್ ಪ್ರೌಢ ಶಾಲೆ ತೃತೀಯ, ಮಹದೇವನಗರದ ಜೆಎಸ್‌ಎಸ್ ಪ್ರೌಢಶಾಲೆ ನಾಲ್ಕನೇಯ, ಬರಗಿ ಜೆಎಸ್‌ಎಸ್ ಪ್ರೌಢಶಾಲೆ ಐದನೇ ಹಾಗೂ ವಾಲೂರಿನ ಜೆಎಸ್‌ಎಸ್ ಪ್ರೌಢಶಾಲೆ 6ನೇ ಬಹುಮಾನವನ್ನು ಪಡೆದು ಕೊಂಡರು.

6ನೇ ಪುಟಕ್ಕೆ

# ವೈಶಿಷ್ಟ್ಯತೆಯಿಂದ ಕೂಡಿದ ಜಾತ್ರೆ : ಶ್ರೀ ಎನ್. ಮಹೇಶ್



ಮೈಸೂರಿನ ಸುತ್ತಮುತ್ತಲಿನ ಜಾತ್ರೆಗಳಲ್ಲಿ ಸುತ್ತೂರು ಜಾತ್ರೆಯು ಅತಿ ದೊಡ್ಡ ಜಾತ್ರೆಯಾಗಿದೆ. ಜಾತ್ರೆಯಲ್ಲಿ ಪ್ರತಿ ದಿನವೂ ಸಾವಿರಾರು ಭಕ್ತಾದಿಗಳು ಪಾಲ್ಗೊಳ್ಳುತ್ತಾರೆ. ಇಂತಹ ಮಹಾ ಜಾತ್ರಾ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ನಾನು ಭಾಗ ವಹಿಸಿರುವುದು ಬಹಳ ಖುಷಿಯಾಗಿದೆ ಎಂದು ಶಾಸಕರು ಹಾಗೂ ಮಾಜಿ ಸಚಿವರಾದ **ಶ್ರೀ ಎನ್. ಮಹೇಶ್** ಅವರು ಹೇಳಿದರು.

ದೇಸಿ ಆಟಗಳು, ದೋಣಿ ವಿಹಾರ, ರಂಗೋಲಿ ಮತ್ತು ಸೋಬಾನೆ ಪದ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತ ನಾಡಿದ ಅವರು ಸುತ್ತೂರು ಜಾತ್ರೆಯು ಒಂದು ವಿಶಿಷ್ಟವಾದ ಜಾತ್ರೆಯಾಗಿದ್ದು ಎಲ್ಲಾ ರೀತಿಯ ವರ್ಗದ ಜನರು ಜಾತ್ರೆಗೆ ಬಂದು ಹೋಗ ಬಹುದಾದ ತಿಂಗಳಲ್ಲಿಯೇ ಆಯೋಜಿಸಿರುವುದು ಜನರು ಜಾತ್ರೆಗೆ ಬಂದು ಹೋಗಲು ಅನುಕೂಲವಾಗಿದೆ. ಸುತ್ತೂರು ಜಾತ್ರೆಯ ವೈಶಿಷ್ಟ್ಯಗಳಲ್ಲಿ ಕೃಷಿ ಮೇಳವೂ ಸಹ ಒಂದು. ಇದು ಗ್ರಾಮೀಣ ಪ್ರದೇಶದ ಅನಕ್ಷರಸ್ಥ ರೈತರಿಗೆ ಉಪಯೋಗಕಾರಿಯಾಗಿದೆ. ಸಾರ್ವಜನಿಕರು ಪ್ರತಿ ನಿತ್ಯ ತಮ್ಮ ವೈಯುಕ್ತಿಕ ಜಂಜಾಟಗಳನ್ನು ಬದಿಗಿಟ್ಟು ಸುತ್ತೂರು ಜಾತ್ರೆಗೆ ಭೇಟಿ ಕೊಟ್ಟರೆ ಮನಃಶಾಂತಿ ಸಿಗುತ್ತದೆ ಎಂದು ಹೇಳಿದರು.

ದೇಸಿ ಆಟಗಳ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಅವುಗಳ ಪ್ರಾಮುಖ್ಯತೆಯನ್ನು ಹೆಚ್ಚಿಸುವ ಪ್ರಯತ್ನವಾಗುತ್ತದೆ. ಇದರ ಮೂಲಕ ಗ್ರಾಮೀಣ ಜಗತ್ತನ್ನು ತೆರೆದು ತೋರಿಸುವ ಕಾರ್ಯವನ್ನು ಸುತ್ತೂರು ಜಾತ್ರೆ ಮಾಡುತ್ತಿದೆ. ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು ಪ್ರಶಂಸನೀಯ ಎಂದು ನುಡಿದರು. - ಹರ್ಷಿತ ಎಂ

ಸುತ್ತೂರು ಜಾತ್ರೆಯ ನೇರ ವೀಕ್ಷಣೆಗಾಗಿ
www.jssonline.org

1ನೇ ಪುಟದಿಂದ

## ಶ್ರೀ ಬಣ್ಣನೆ...

ಅಂತರ್ಯದಲ್ಲಿರುವ ಶಕ್ತಿ ಉಜ್ವಲಗೊಳ್ಳುತ್ತದೆ. ಅಂತರಂಗ ವಿಕಾಸ ಮತ್ತು ಸಾಮಾಜಿಕ ಪ್ರಗತಿ ಸಾಧ್ಯವಾಗುತ್ತದೆ ಎಂದು ಹೇಳಿದ ಅವರು ಅಕ್ಕಮಹಾದೇವಿಯವರ ವಚನದ ಉದಾಹರಣೆಯನ್ನು ಕೊಟ್ಟು ಮನಸ್ಸಿಗೆ ಸಂಸ್ಕಾರ ಕೊಡುವ ವಿವಿಧ ಕಾರ್ಯಕ್ರಮಗಳು ಈ ಜಾತ್ರೆಯಲ್ಲಿ ನಡೆಯುತ್ತಿವೆ. ಪ್ರಸ್ತುತ ಜಗತ್ತಿಗೆ ಬೇಕಾಗಿರುವ ಎಲ್ಲವನ್ನು ಜಾತ್ರೆಯ ನೆಪದಲ್ಲಿ ಸುತ್ತೂರು ಶ್ರೀಕ್ಷೇತ್ರ ಕಾರ್ಯನಿರ್ವಹಿಸುತ್ತಿದೆ. ಕೃಷಿಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ರೈತರಿಗೆ ತಲುಪಿಸುವಲ್ಲಿ ಕೃಷಿ ಮೇಳ ಯಶಸ್ವಿಯಾಗಿದೆ. ಈ ನಿಟ್ಟಿನಲ್ಲಿ ಸುತ್ತೂರು ಶ್ರೀಗಳ ಕಾರ್ಯ ಅನನ್ಯವಾದುದಾಗಿದೆ ಎಂದು ನುಡಿದರು.

## ಈ ಬಾರಿ ....?!

ಏರ್ಪಡಿಸಲಾಗಿದೆ. ಈ ಬಾರಿ 184 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಲಿದ್ದಾರೆ. ಜಾತ್ರಾ ಸಂದರ್ಭದಲ್ಲಿ ಮಾತ್ರವಲ್ಲದೆ, ಶ್ರೀಕ್ಷೇತ್ರದಲ್ಲಿ 2009ರಿಂದಲೂ ಪ್ರತಿತಿಂಗಳು ಸಾಮೂಹಿಕ ವಿವಾಹವನ್ನೂ ನಡೆಸಲಾಗುತ್ತಿದೆ. ಈವರೆಗೆ 234ಕ್ಕೂ ಹೆಚ್ಚು ವಿವಾಹಗಳು ನೆರವೇರಿವೆ. ವಿವಾಹಕ್ಕೆ ಆಗಮಿಸುವವರಿಗೆ ವಿವಾಹದ ದಿನದಂದು ಬೆಳಗ್ಗೆ ಮತ್ತು ಮಧ್ಯಾಹ್ನ ಶ್ರೀಮಠದಲ್ಲಿ ಪ್ರಸಾದದ ವ್ಯವಸ್ಥೆ ಇರುತ್ತದೆ. ವಿವಾಹದ ವಿಧಿವಿಧಾನಗಳನ್ನು ಶಾಸ್ತ್ರೋಕ್ತವಾಗಿ ಹಾಗೂ ನಿಯಮಾನುಸಾರವಾಗಿ ನೆರವೇರಿಸಲಾಗುತ್ತದೆ.

ಶುಭಶ್ರೀ ಡಿ.ಎನ್, ಮಂದಾರ ಶ್ರೀನಿವಾಸ್

# ನೋಡಿ ಕಪಿಲಾ ತೀರ; ಮಾಡಿ ದೋಣಿವಿಹಾರ...




ಜಾತ್ರಾ ಮಹೋತ್ಸವದ ಅಂಗವಾಗಿ ಈ ಬಾರಿಯು ದೋಣಿ ವಿಹಾರ ಕಾರ್ಯಕ್ರಮವನ್ನು ಕಪಿಲಾ ನದಿ ದಂಡೆಯಲ್ಲಿ ಮಾಜಿ ಸಚಿವೆಯಾದ ಡಾ. ಗೀತಾಮಹದೇವ ಪ್ರಸಾದ್‌ರವರು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಹಾಗೂ ಮಾಜಿ ಸಚಿವರಾದ ಶ್ರೀ ಎನ್. ಮಹೇಶ್‌ರವರು, ವಿಧಾನ ಪರಿಷತ್ ಸದಸ್ಯರು ಹಾಗೂ ಮಾಜಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪನವರು, ತೋಟಗಾರಿಕೆ ಸಚಿವರಾದ ಶ್ರೀ ಮನಗೂಳಿರವರು, ಮಾಜಿ ಶಾಸಕರಾದ ಶ್ರೀ ಮಹಿಮಾ ಜೆ ಪಟೇಲ್ ಭಾಗವಹಿಸಿದ್ದರು. ಆಗಮಿಸಿದ್ದ ಎಲ್ಲಾ ಅತಿಥಿಗಳು ದೋಣಿಯಲ್ಲಿ ವಿಹರಿಸಿದರು. ದೋಣಿ ವಿಹಾರವನ್ನು ಜನಪ್ರಿಯಗೊಳಿಸಬೇಕೆಂದು ಈ ಬಾರಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಲಕ್ಷ್ಮಣತೀರ್ಥ ಎಂಬ ದೋಣಿಯ ಮೂಲಕ ಚಾಲನೆಯನ್ನು ನಡೆಸಲಾಗುವುದು.

ಈ ದೋಣಿಯು 18 ಸೀಟ್‌ಗಳನ್ನೊಳಗೊಂಡಂತೆ ಪ್ರತಿ ಪ್ರಯಾಣಿಕರಿಗೂ ಸುರಕ್ಷಾ ಕವಚವನ್ನು ನೀಡಲಾಗುತ್ತದೆ. ಹಿರಿಯ ನಾಗರೀಕರಿಗೆ ರೂ. 15/-ರಂತೆ, ಮಕ್ಕಳಿಗೆ ರೂ. 10/- ರಂತೆ ದರ ನಿಗದಿ ಮಾಡಲಾಗಿದೆ. ಒಟ್ಟಿನಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ವತಿಯಿಂದ ಇನ್ನೂ 02 ದೋಣಿಗಳನ್ನು ಒದಗಿಸಲಾಗುವುದು ಎಂದು ಘೋಷಿಸಿದ್ದಾರೆ.

ಈ ಬಾರಿ ದೋಣಿ ವಿಹಾರವು ಜಾತ್ರೆಗೆ ಬರುವ ಯಾತ್ರಿಗಳನ್ನು ಆಕರ್ಷಿಸಿ ಮನಸೆಳೆಯುವಲ್ಲಿ ಯಶಸ್ವಿಯಾಗುವಂತಿದೆ.

ಅನುಷ ಪಿ ಮತ್ತು ಚಂದನ ಜಿ

# 'ಭಗವಂತನಿಗೆ ಹತ್ತಿರವಾಗುವುದೇ ನಿಜಧರ್ಮ'

## ● ಶ್ರೀ ಬಸವರಾಜೇಂದ್ರ ಸ್ವಾಮಿ

ದೇವನೂರು ಗ್ರಾಮದಲ್ಲಿ ಶುಕ್ರವಾರ ಮುಂಜಾನೆ ಸ್ನೇಹಸೌಹಾರ್ದ ಶಾಂತಿ ಪ್ರಾರ್ಥನಾ ಪಥ ಸಂಚಲನ ಕಾರ್ಯಕ್ರಮ ಜರುಗಿತು. ಊರಿನ ಪ್ರಮುಖ ಬೀದಿಗಳಲ್ಲಿ ಕಂಸಾಳೆ, ವೀರಗಾಸೆ, ಮಹಿಳೆಯರ ಪೂರ್ಣ ಕುಂಭಕಳಶದೊಂದಿಗೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಗೆ ಭಕ್ತಾದಿಗಳು ಪೂಜೆ ಸಲ್ಲಿಸಿ ಊರಿನ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ಮೆರವಣಿಗೆ ಮಾಡಿದರು.



ಅರಕಲಗೂಡು ತಾಲ್ಲೂಕು, ಕೆಸವತ್ತೂರು ಗ್ರಾಮದ ಶ್ರೀ ಸಿದ್ಧಲಿಂಗೇಶ್ವರ ವಿರಕ್ತ ಮಠದ ನಿ.ಪ್ರ.ಸ್ವ. ಶ್ರೀ ಬಸವರಾಜೇಂದ್ರ ಸ್ವಾಮಿಗಳವರು ಷಟ್‌ಸ್ಥಲ ಧ್ವಜಾರೋಹಣವನ್ನು ನೆರವೇರಿಸಿ ಆಶೀರ್ವಚನ ನೀಡುತ್ತಾ, ಧರ್ಮ, ಸಾಹಿತ್ಯ, ಶಿಕ್ಷಣ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಹಲವಾರು ರೀತಿಯಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡಿದ್ದಾರೆ ಅಲ್ಲದೆ ಅವರು ಇರುವಷ್ಟು ದಿನ ಜನರಿಗೆ ಸೇವೆ ಮಾಡುತ್ತಾ, ಬದುಕಿದ ಮಹಾ ಸಂತರು. ಇಂಥವರಿಂದ ಗುರುವಾಣಿ, ಶಿವವಾಣಿ, ವೀರಶೈವ ಧರ್ಮವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರವಾಗಿದೆ ಎಂದು ಹೇಳಿದರು.

ನರಗುಂದದ ಶ್ರೀ ಪಂಚಗೃಹ ಗುಡ್ಡದ ಹಿರೇಮಠ ಪೀಠಾಧ್ಯಕ್ಷರಾದ ಷ.ಬ್ರ. ಶ್ರೀ ಸಿದ್ಧಲಿಂಗ ಶಿವಾಚಾರ್ಯಸ್ವಾಮಿಗಳವರು ಧರ್ಮ ಸಂದೇಶ ನೀಡುತ್ತಾ, ಸಿದ್ಧಗಂಗಾಮಠದ ತ್ರಿವಿಧ ದಾಸೋಹಿ ಶ್ರೀ ಶಿವಕುಮಾರಸ್ವಾಮಿಗಳವರನ್ನು ಸ್ಮರಿಸಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳನ್ನು ನೆನೆಯುತ್ತಾ, ಯೇಸು ಸಿಲುಬೆಗೆ ಏರಿದ ಘಳಿಗೆ, ಮದರ್ ಥೆರೆಸಾ ಭಾರತಕ್ಕೆ ಬಂದ ಘಳಿಗೆ, ಶ್ರೀ ಗುರುಮಲ್ಲೇಶ್ವರ ಆವರಣದಲ್ಲಿ ಧ್ವಜಾ ರೋಹಣವನ್ನು ಏರಿಸಿದ ಈ ಘಳಿಗೆ ನಮ್ಮ ಅಜ್ಞಾನವನ್ನು ಹೋಗಲಾಡಿಸಿದ ಘಳಿಗೆಯಾಗಿದೆ. 21ನೇ ಶತಮಾನದ ಕಾಮಧೇನು ಶ್ರೀ ಗುರುಮಲ್ಲೇಶ್ವರರು ಧರ್ಮದ ಆದಿಯಲ್ಲಿರುವರು ಭಗವಂತನಿಗೆ ಹತ್ತಿರವಾಗುವುದೇ ನಿಜಧರ್ಮ. ಇರುವುದಕ್ಕೆ ಮನೆ, ತಿನ್ನುವುದಕ್ಕೆ ಸ್ವಲ್ಪ ಅನ್ನ ಹಾಗೂ ಬದುಕನ್ನು ಹೇಗೆ ನಡೆಸಬೇಕು ಎಂದು ಹೇಳಿಕೊಡುವವರೇ ಗುರುಗಳು ಹಾಗೂ ಸಂತರು. ಮನುಷ್ಯನನ್ನು ಯಾವುದರಿಂದ ತೃಪ್ತಿಗೊಳಿಸಬಹುದೆಂದರೇ, ಅದು ದಾಸೋಹದಿಂದ ಮಾತ್ರ, ಅದು ಶ್ರೀ ಗುರುಮಲ್ಲೇಶ್ವರ ಮಠದಲ್ಲೂ ನಿರಂತರವಾಗಿ ನಡೆದುಕೊಂಡು ಬಂದಿದೆ. ದೇವನೂರಿನ ಶ್ರೀ ಗುರು ಮಲ್ಲೇಶ್ವರ ಮಠವು ತನ್ನದೇ ಆದ ಭವ್ಯಪರಂಪರೆ ಹಾಗೂ ಇತಿಹಾಸವನ್ನು ಹೊಂದಿದೆ ಎಂದು ತಿಳಿಸಿದರು.

ವೇದಿಕೆಯ ಅಧ್ಯಕ್ಷತೆಯನ್ನು ವಹಿಸಿದ್ದ ದೇವನೂರು ಶ್ರೀ ಗುರುಮಲ್ಲೇಶ್ವರ ಮಹಾಸಂಸ್ಥಾನ ತ್ರಿವಿಧ ದಾಸೋಹ ಮಠದ ಅಧ್ಯಕ್ಷರಾದ ಶ್ರೀ ಮಹಂತ ನಿರಂಜನ ಪ್ರಣವ ಸ್ವರೂಪಿ ಶ್ರೀ ಮಹಂತಸ್ವಾಮಿಗಳವರು ಆಶೀರ್ವಚನವನ್ನು ನೀಡುತ್ತಾ, ಆಡುಮುಟ್ಟದ ಸೊಪ್ಪಿಲ್ಲ, ಸುತ್ತೂರು ಮಠ ಮಾಡದ ಕಾರ್ಯವಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. –ಎಸ್. ಸೋಮೇಶ, ಎಂ. ಹರ್ಷಿತಾ, ಎಂ. ಚೈತ್ರ



ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎನ್. ಮಹೇಶ್ ಅವರು 'ಹುಲಿ–ಕರು' ಆಟವನ್ನು ಆಡುವುದರ ಮೂಲಕ ಚಾಲನೆ ನೀಡಿದರು. ಚಿತ್ರದಲ್ಲಿ ಜಗದ್ಗುರುಗಳವರು, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪ ಮೊದಲಾದವರಿದ್ದಾರೆ.




**2 ಫೆಬ್ರವರಿ 2019**

ಪ್ರಾತಃಕಾಲ 4.00: ಕರ್ತೃಗದ್ದುಗೆ : ಮಹಾರುದ್ರಾಭಿಷೇಕ

**ಬೆಳಗ್ಗೆ 6.00 :** ಕರ್ತೃಗದ್ದುಗೆ: ಲಕ್ಷಬಿಲ್ವಾರ್ಚನೆ ಪ್ರಾರಂಭ

**ಬೆಳಗ್ಗೆ 6.30 :** ಸುತ್ತೂರು: ಸ್ನೇಹ–ಸೌಹಾರ್ದ–ಶಾಂತಿ: ಪ್ರಾರ್ಥನಾ ಪಥಸಂಚಲನ

**ಬೆಳಗ್ಗೆ 8.00 :** ಕರ್ತೃಗದ್ದುಗೆ: ಷಟ್‌ಸ್ಥಲ ಧ್ವಜಾರೋಹಣ: ನಿ.ಪ್ರ.ಸ್ವ.ಶ್ರೀ ಸಿದ್ಧಮಲ್ಲ ಸ್ವಾಮಿಗಳು, ಶ್ರೀ ನೀಲಕಂಠಸ್ವಾಮಿ ಮಠ, ಮೈಸೂರು, ಶ್ರೀ ಕಲ್ಲು ಮಠ, ಅಗರ, ಯಳಂದೂರು ತಾ.,

**ಧರ್ಮಸಂದೇಶ :** ಷ.ಬ್ರ.ಶ್ರೀ ಸಿದ್ದರಾಮ ಶಿವಾಚಾರ್ಯ ಸ್ವಾಮಿಗಳು, ಶ್ರೀ ಮಹಂತೇಶ್ವರ ಮಠ, ಚಿನ್ಮಯಗಿರಿ, ಅಫ್ಜಲ್‌ಪುರ ತಾ.

**ಬೆಳಗ್ಗೆ 7.30 :** ಮಹಾಮಂಗಳಾರತಿ

**ಬೆಳಗ್ಗೆ 9.00 :** ಶ್ರೀ ಸೋಮೇಶ್ವರ ದೇವಸ್ಥಾನ, ಅಷ್ಟೋತ್ತರ ಶತಕುಂಭಾಭಿಷೇಕ, ಮಹಾಮಂಗಳಾರತಿ

**ಬೆಳಗ್ಗೆ 10.45:** ಸಹಸ್ರ ಕುಂಭೋತ್ಸವ (ಹಾಲ್ಹರವಿ ಉತ್ಸವ), ಶ್ರೀ ಸೋಮೇಶ್ವರ ಸ್ವಾಮಿ ಉತ್ಸವ

**ಬೆಳಗ್ಗೆ 11.00 :** ಮಹಾರುದ್ರಾಭಿಷೇಕ

**ಮಧ್ಯಾಹ್ನ 12.00:** ಮಹಾಮಂಗಳಾರತಿ

**ಸಂಜೆ 6.00 :** ಕ್ಷೀರಾಭಿಷೇಕ ಮತ್ತು ಮಹಾರುದ್ರಾಭಿಷೇಕ

**ರಾತ್ರಿ 7.30 :** ಮಹಾಮಂಗಳಾರತಿ

# ಸರ್ಕಾರದ ಯೋಜನೆಗಳ ಮಾಹಿತಿ ಕೇಂದ್ರ

ಸುತ್ತೂರು ಜಾತ್ರಾ ಮಹೋತ್ಸವ ಪ್ರತಿಬಾರಿ ಒಂದಲ್ಲಾ ಒಂದು ವಿಶೇಷತೆಯಿಂದ ಸದ್ದು ಮಾಡುತ್ತಿದೆ. ಅದರಂತೆ ಈ ಬಾರಿಯು ಕೂಡ ಭಕ್ತಾದಿಗಳಿಗೆ ಮತ್ತು ರೈತರಿಗೆ ಅನುಕೂಲವಾಗುವಂತೆ ಮೊಟ್ಟ ಮೊದಲ ಬಾರಿಗೆ ಜಾತ್ರಾ ಮಹೋತ್ಸವದ ಆವರಣದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಮಾಹಿತಿ ಕೇಂದ್ರವನ್ನು ತೆರೆದಿದ್ದು, ಇಲ್ಲಿಗೆ ಭೇಟಿ ನೀಡಿದ ಪ್ರತಿಯೊಬ್ಬರಿಗೂ ಉಪಯುಕ್ತ ಮಾಹಿತಿ ಹಾಗೂ ಸರ್ಕಾರದ




ಯೋಜನೆಗಳನ್ನು ತಿಳಿಸಿಕೊಡಲಾಗುತ್ತಿದೆ. ಈ ಮಾಹಿತಿ ಕೇಂದ್ರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಿರುವ ಹಲವಾರು ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುತ್ತಿದ್ದಾರೆ. ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ, ರೈತ ಬಂಧು ಯೋಜನೆ, ಆಧುನಿಕ ಕೃಷಿ ಪದ್ಧತಿಗೆ ಆದ್ಯತೆ, ಹಸಿರು ಕರ್ನಾಟಕ ಯೋಜನೆ, ಮೆಟ್ರೋ ಹಂತ–2 ಯೋಜನೆ, ಜನತಾದರ್ಶನ, ಕೈಗಾರಿಕಾ ಕ್ಲಸ್ಟರ್‌ಗಳ ಸ್ಥಾಪನೆ, ಮುಖ್ಯಮಂತ್ರಿ ಮಾತೃಶ್ರೀ ಯೋಜನೆ, ಸಂಧ್ಯಾ ಸುರಕ್ಷಾ ಯೋಜನೆ ಹೀಗೆ ಹಲವಾರು ವಿವಿಧ ಯೋಜನೆಗಳನ್ನು ಈ ಮಾಹಿತಿ ಕೇಂದ್ರದಲ್ಲಿ ಪ್ರದರ್ಶಿಸಲಾಗಿದೆ. 'ಪ್ರತಿರೂಪಿ' ಸಂಸ್ಥೆಯ ಕಲಾ ನಿರ್ದೇಶಕರಾದ ಶ್ರೀ ಶಶಿಧರ್ ಅಡಪರವರು ಇದರ ಉಸ್ತುವಾರಿಯಲ್ಲಿದ್ದಾರೆ. – ಡಿ.ಎನ್. ಶುಭಶ್ರೀ

ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಮಹಿಮಾ ಜೆ. ಪಟೇಲ್ ಅವರು ದೇಸಿ ಆಟವಾದ ಗೋಲಿ ಸ್ಪರ್ಧೆಗೆ ಚಾಲನೆ ನೀಡಿದ ಪರಿ.



# ಜಾತ್ರೆಯೊಳಗೊಂದು ಸುತ್ತು...


## ಪುಣ್ಯ ಕ್ಷೇತ್ರಕ್ಕೆ ಬಂದು ಪಾವನಳಾದೆನು



ಈ ಪುಣ್ಯ ಕ್ಷೇತ್ರದಲ್ಲಿ ನಡೆಯುವ ಜಾತ್ರೆಗೆ ನಾನು ಮೊದಲನೇ ಬಾರಿಗೆ ಬಂದಿದ್ದೇನೆ. ನನ್ನ ಸ್ನೇಹಿತೆಯ ಸಲಹೆಯ ಮೇರೆಗೆ ಇಲ್ಲಿಗೆ ಬಂದೆ, ಶಿವರಾತ್ರೀಶ್ವರರು ಮತ್ತು ಮಹದೇಶ್ವರರ ಗದ್ದುಗೆಗಳನ್ನು ನೋಡಿ ಪಾವನಳಾದೆನು. ಪ್ರತಿವರ್ಷವೂ ಬರಬೇಕೆಂಬ ನಿರ್ಧಾರ ಮಾಡಿದ್ದೇನೆ.

**–ಮಂಜುಳ, ಮೈಸೂರು**

## ರಥೋತ್ಸವವನ್ನು ಕಣ್ತುಂಬಿಕೊಳ್ಳಲು ಕಾತುರನಾಗಿದ್ದೇನೆ



ನನ್ನ ಮಗ ಶ್ರೀಮಠದ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ ಅವನನ್ನು ನೋಡುವ ಕಾತುರ ಹಾಗೂ ಸುತ್ತೂರು ಜಾತ್ರೆಯ ಸಂಭ್ರಮವನ್ನು ಆನಂದಿಸುವ ಬಯಕೆ ನನ್ನನ್ನು ಪ್ರತಿ ವರ್ಷ ಸುತ್ತೂರಿಗೆ ಕರೆತರುತ್ತಿದೆ. ಎಲ್ಲದಕ್ಕಿಂತ ಮುಖ್ಯವಾಗಿ ನನಗೆ ಸುತ್ತೂರು ರಥೋತ್ಸವವನ್ನು ನೋಡಲು ಬಹಳ ಖುಷಿಯಾಗುತ್ತದೆ.

**– ಶ್ಯಾಣಪ್ಪ, ಗುಲ್ಬರ್ಗ**

## ಶ್ರೀಗಳು ಭಕ್ತಿಗೌರವಗಳ ಪ್ರತೀಕ



ನನ್ನ ಹಾಗೂ ಶ್ರೀಮಠದ ನಂಟು ಬಹಳ ಹಿಂದಿನದು ನನ್ನ ವಿದ್ಯಾಭ್ಯಾಸದೊಂದಿಗೆ ನನ್ನ ಮಕ್ಕಳ ವಿದ್ಯಾಭ್ಯಾಸದವರೆಗೂ ಸುತ್ತೂರು ಮಠ ನಮಗೆ ಆಶ್ರಯ ನೀಡಿದೆ. ನಾನು 23 ವರ್ಷಗಳಿಂದಲೂ ಸುತ್ತೂರು ಜಾತ್ರೆಯಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಮ್ಮ ಬುದ್ಧಿಗಳಾದ ಸುತ್ತೂರು ಶ್ರೀಗಳನ್ನು ಕಂಡರೆ ನಮಗೆ ಬಹಳ ಗೌರವ ಹಾಗೂ ಭಕ್ತಿ.

**– ಮಹದೇವಸ್ವಾಮಿ, ಚಾಮರಾಜನಗರ**

## ಸ್ವಚ್ಛತೆಗೆ ಆದರ್ಶ ಶ್ರೀಮಠ



ಸುತ್ತೂರು ಜಾತ್ರೆಯು ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ವೈದ್ಯಕೀಯ, ಕೃಷಿಯ ಸಮ್ಮಿಲನ. ಇಲ್ಲಿ ಪ್ರತಿಯೊಬ್ಬರಿಗೂ ಎಲ್ಲಾ ರೀತಿಯ ವ್ಯವಸ್ಥೆಯು ದೊರಕುತ್ತಿದೆ ಹಾಗೂ ಶ್ರೀಮಠವು ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ಕೊಟ್ಟಿದೆ. ನಾನು ಮೈಸೂರಿನ ಆಯುರ್ವೇದ ಕಾಲೇಜಿನ ಪ್ರಾಂಶುಪಾಲನಾಗಿ ಜಾತ್ರಾ ಸೇವೆಯ ನಿಮಿತ್ತ ಸುತ್ತೂರಿಗೆ ಬಂದಿರುತ್ತೇನೆ.

**– ಡಾ. ರಾಜೇಶ್ ಉದುಪುಡಿ, ಪ್ರಾಂಶುಪಾಲರು, ಮೈಸೂರು**

## ಮಾದರಿಗಳ ಮೂಲಕ ಜನಜಾಗೃತಿ

ನಾನು ಮೂಲತಃ ಟಿ.ನರಸೀಪುರದವನು ಕಳೆದ ಮೂರು ವರ್ಷಗಳಿಂದಲೂ ಸುತ್ತೂರು ಜಾತ್ರೆಗೆ ಬರುತ್ತಿದ್ದೇನೆ. ನಾನು ದಾವಣಗೆರೆಯ ಶ್ರವಣ ಮತ್ತು ವಾಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ವಿದ್ಯಾರ್ಥಿಗಳು ಪಾಲ್ಗೊಂಡು ವಸ್ತುಪ್ರದರ್ಶನದಲ್ಲಿ ಮಾದರಿಗಳ ಪ್ರದರ್ಶನ ಮಾಡುವ ಮೂಲಕ ಎಲ್ಲರಲ್ಲಿಯೂ ಜಾಗೃತಿಯನ್ನುಂಟು ಮಾಡುವ ಉದ್ದೇಶ ನಮ್ಮದಾಗಿದೆ.

**– ಮಧು, ದಾವಣಗೆರೆ**

ವರದಿ: **ಪಿ. ಅನುಷ, ಜೆ. ಚಂದನ**



**ಭಜನಾಮೇಳದ ಸ್ಪರ್ಧೆಯಲ್ಲಿ ಸ್ವರವೆತ್ತಿ ಹಾಡುತ್ತಿರುವ ಹಿರಿಯ ಗಾಯಕರು**

# ಬಡ ಮಕ್ಕಳ ದಾರಿದೀಪ ಶ್ರೀಮಠ



ಸುತ್ತೂರು ಜಾತ್ರಾ ಮಹೋತ್ಸವದ ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ವಾಸುರವರು ನಾಡಿನಾದ್ಯಂತ ವಿವಿಧ ಪ್ರದೇಶಗಳಲ್ಲಿ ಹಲವಾರು ಜಾತ್ರೆಗಳು ಜರುಗುತ್ತಿರುವುದನ್ನು ಕಂಡಿದ್ದೇನೆ. ಆದರೆ ಈ ಕ್ಷೇತ್ರದಲ್ಲಿ ನಡೆಯುವ ಜಾತ್ರೆಯು ವಿಶಿಷ್ಟವಾದುದು ಅಲ್ಲದೇ ಈ ಸುತ್ತೂರು ಶ್ರೀಮಠಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು ಜ್ಞಾನಾನ್ನ ದಾಸೋಹದ ಪರಂಪರೆಯುಳ್ಳ ಈ ಸಂಸ್ಥೆ ರಾಜ್ಯ ರಾಷ್ಟ್ರವಲ್ಲದೇ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಕೃಷಿ ಕ್ಷೇತ್ರದಲ್ಲಿ ಸಾಧನೆಗೈದಿರುವ ಶ್ರೇಷ್ಠ ವ್ಯಕ್ತಿಗಳನ್ನು ತಯಾರಿಸುವ ದೊಡ್ಡ ಕಾರ್ಖಾನೆಯಾಗಿದೆ. ರಾಷ್ಟ್ರಾದ್ಯಂತ ಅನೇಕ ವಿಜ್ಞಾನಿಗಳು ರಾಜಕಾರಣಿಗಳು, ಸಾಹಿತಿಗಳು, ಹಲವು ಗಣ್ಯರು ಶ್ರೀಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದು ಶ್ರೀಮಠವು ಎಲ್ಲರಿಗೂ ಆದರ್ಶನೀಯವಾಗಿದೆ ಎಂದು ಹೇಳಿದ ಅವರು ನನ್ನ ಮಕ್ಕಳೂ ಸಹ ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು ನನಗೆ ಹೆಮ್ಮೆ ಎನಿಸುತ್ತಿದೆ.

ಸಾವಿರಾರು ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿರುವ ಶ್ರೀಮಠವು ನಿರ್ಗತಿಕರ ಬಾಳಿಗೆ ದಾರಿದೀಪವಾಗಿದೆ. ಇಂತಹ ನಾಡಿನಲ್ಲಿ ಹುಟ್ಟಿರುವುದು ನಮ್ಮ ಪುಣ್ಯ, ಬೇರೆ ದೇಶಗಳಲ್ಲಿ ಇಂತಹ ಸಂಸ್ಕಾರವನ್ನು ಎಂದಿಗೂ ನೋಡಲು ಸಾಧ್ಯವಿಲ್ಲ ಸರ್ಕಾರವೇ ಕೊಡದ ಸೌಲಭ್ಯವನ್ನು ಸುತ್ತೂರು ಶ್ರೀಕ್ಷೇತ್ರ ನೀಡುತ್ತಿದೆ ಎಂದು ಹೇಳಿದರು.

– ವಿ. ಪ್ರಿಯದರ್ಶಿನಿ

# ‘ಸರ್ವರನ್ನೂ ಪೊರೆಯುವ ಶ್ರೀಮಠ’




ಶ್ರೀ ಕ್ಷೇತ್ರವು ತ್ರಿವಿಧ ದಾಸೋಹಗಳಿಂದ ವಿಶ್ವದಾದ್ಯಂತ ಭಕ್ತ ಸಮೂಹವನ್ನು ಹೊಂದಿದ್ದು ಇಂದಿನ ಸಮಾಜದಲ್ಲಿ ಸಂಸ್ಕೃತಿ ಉಳಿಸುವಲ್ಲಿ ಶ್ರೀಗಳ ಪಾತ್ರ ಅಗ್ರಗಣ್ಯವಾದದ್ದು ಎಂದು ಶಾಸಕರು ಹಾಗೂ ಕರ್ನಾಟಕ ರಾಜ್ಯ ಖನಿಜ ನಿಗಮದ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್‌ರವರು ಹೇಳಿದರು.

ಸೋಬಾನೆ ಪದ ಸ್ಪರ್ಧೆ ಉದ್ಘಾಟನಾ ಕಾರ್ಯ ಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಅಂದು ಶ್ರೀಮಠವು ಆರಂಭಿಸಿದ ಅನ್ನ ದಾಸೋಹವೇ ಇಂದು ಸರ್ಕಾರದ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಸ್ಫೂರ್ತಿಯಾಗಿದೆ. ‘ದಯವಿಲ್ಲದ ಧರ್ಮವಾವುದಯ್ಯಾ’ ಎಂಬ ಬಸವಣ್ಣನ ನುಡಿಯಂತೆ ಧರ್ಮ ಸಂಸ್ಕೃತಿ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಶ್ರೀಮಠವು ಶ್ರಮಿಸುತ್ತಿದ್ದು ‘ಸರ್ವೇಜನೋ ಸುಖಿನೋ ಭವಂತು’ ಎಂಬ ಉಕ್ತಿಯ ಆಶಯದೊಂದಿಗೆ ಜಾತಿ, ಧರ್ಮಗಳ ತಾರತಮ್ಯವಿಲ್ಲದೆ ಸರ್ವರನ್ನು ಪೊರೆಯುತ್ತಿದೆ ಎಂದು ಅವರು ತಿಳಿಸಿದರು. – ಜೆ.ಎನ್. ಕುಮಾರ



# ದೇಶಿ ಆಟೋಟಗಳ ಸ್ಪರ್ಧೆ



ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀಕ್ಷೇತ್ರದ ಶಾಲಾ ಕ್ರೀಡಾಂಗಣದಲ್ಲಿ 3 ಮತ್ತು 4ನೇ ಫೆಬ್ರವರಿ 2019ರಂದು 2 ದಿನಗಳ ಕಾಲ ಗ್ರಾಮೀಣ ಜನತೆಗಾಗಿ, ಜನತೆಯಿಂದ, ಜನಗಳಿಗೋಸ್ಕರ ದೇಸಿ ಆಟಗಳ ಕ್ರೀಡಾಕೂಟವನ್ನು ಹಮ್ಮಿಕೊಳ್ಳಲಾಗಿದೆ.

ಪುರುಷರಿಗಾಗಿ ಫೆಬ್ರವರಿ 3ರ ಭಾನುವಾರದಂದು ಕೆಸರುಗದ್ದೆ ಓಟ, ಕೆಸರುಗದ್ದೆಯಲ್ಲಿ ಹಗ್ಗ–ಜಗ್ಗಾಟ, 50 ಕೆ.ಜಿ. ತೂಕದ ಚೀಲ ಹೊತ್ತುಕೊಂಡು ಓಡುವುದು, ಕಲ್ಲುಗುಂಡು ಎತ್ತುವುದು, ಬುಗುರಿ ಆಟಗಳ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.



ಮಹಿಳೆಯರಿಗಾಗಿ ಫೆಬ್ರವರಿ 4ರ ಸೋಮವಾರದಂದು ನಿಂಬೆಹಣ್ಣು ಇರುವ ಚಮಚವನ್ನು ಬಾಯಲ್ಲಿಟ್ಟುಕೊಂಡು ಓಡುವುದು, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಕೆ ಒಡೆಯುವುದು, ಮೈದಾನದಲ್ಲಿ ಹಗ್ಗ–ಜಗ್ಗಾಟ, ಅಳಿಗುಳಿ ಮನೆ, ಅಣ್ಣೆ–ಕಲ್ಲು, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಮೇಲ್ಕಂಡ ಎರಡೂ ದಿನಗಳ ಸ್ಪರ್ಧೆಗಳಲ್ಲಿ ಭಾಗವಹಿಸಲು ಉತ್ಸುಕರಾಗಿರುವ ಸ್ಪರ್ಧಿಗಳು ನಿಗದಿತ ದಿನಾಂಕದಂದು ಬೆಳಿಗ್ಗೆ 7 ರಿಂದ 11 ಗಂಟೆಯ ಒಳಗೆ ನೋಂದಣಿ ಮಾಡಿಸಿ ಸ್ಪರ್ಧೆಯಲ್ಲಿ ಭಾಗವಹಿಸಬಹುದು.

ಫೆಬ್ರವರಿ 2 ರಿಂದ 5ರವರೆಗೆ ಜೆಎಸ್‌ಎಸ್ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಗಾಗಿ ದೇಸಿ ಆಟಗಳ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ಬಾಲಕರ ವಿಭಾಗದಿಂದ ಗೋಲಿ, ಬುಗುರಿ, ಹುಲಿ–ಕುರಿ, ನವಕಂಕರಿ, ಹಾವು–ಏಣಿ, ಚೌಕಬಾರ, ಚದುರಂಗ, ಕೆಸರು ಗದ್ದೆ ಓಟ, ಮೈದಾನದಲ್ಲಿ ಹಗ್ಗ–ಜಗ್ಗಾಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಬಾಲಕಿಯರ ವಿಭಾಗದಿಂದ ಅಣ್ಣೆಕಲ್ಲು, ಕುಂಟೋ ಬಿಲ್ಲೆ, ಹುಲಿ–ಕುರಿ, ನವಕಂಕರಿ, ಹಾವು–ಏಣಿ, ಚೌಕಬಾರ, ಚದುರಂಗ, ಅಳಿಗುಳಿ ಮನೆ, ಮೈದಾನದಲ್ಲಿ ಹಗ್ಗ–ಜಗ್ಗಾಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.




**2 ಫೆಬ್ರವರಿ 2019 ಶನಿವಾರ * ಗದ್ದುಗೆ ಆವರಣ**

**ಬೆಳಗ್ಗೆ 8.00 :** ನಾದಸ್ವರ
**9.00 : ವಚನ ಗಾಯನ :** ಶ್ರೀ ಮಂತ್ರಮಹರ್ಷಿ ಗಾನ ಕಲಾತಂಡ, ಮೈಸೂರು
**10.00 :** ಸುಗ್ಗಿಪದ ಮತ್ತು ಗೀಗಿಪದ : ಶ್ರೀ ಹೆಚ್.ಕೆ.ಪುಟ್ಟೇಗೌಡ, ಹೆಬ್ಬಾಳು, ಕೆ.ಆರ್.ನಗರ ತಾ.
**11.00 :** ಭಕ್ತಿಗೀತೆ ಮತ್ತು ಜಾನಪದ ಗೀತೆ : ಮುತ್ಯಾಲಮ್ಮ ಕಲಾ ತಂಡ, ದೊಡ್ಡಬಳ್ಳಾಪುರ.
**ಮಧ್ಯಾಹ್ನ 12.00 :** ಗಾನ ಲಹರಿ : ಗಾನಗಂಗಾ ತಂಡ, ಹನುಮನಪುರ, ನಂಜನಗೂಡು ತಾ.
**1.30 :** ಜಾನಪದ ಗೀತೆಗಳು : ಶ್ರೀಮತಿ ಲಕ್ಷ್ಮಿ ಮಹಾದೇವ, ಆರಿಬೆಂಚಿ, ಸವದತ್ತಿ ತಾ.
**2.30 :** ಸುಗಮ ಸಂಗೀತ : ಪಂಡಿತ್ ಪಂಚಾಕ್ಷರಿ ಗವಾಯಿಗಳ ಅಂಧರ ಸಂಗೀತ ಕಲಾ ಬಳಗ (ರಿ), ಕಲಬುರಗಿ
**ಸಂಜೆ 6.30 :** ನೃತ್ಯರೂಪಕ : 'ಸರ್ವಶಿವಂ' ಶ್ರೀ ಮಾತೃಕಾ ಕಲ್ಚರಲ್ ಟ್ರಸ್ಟ್ (ರಿ), ಬೆಂಗಳೂರು
**ರಾತ್ರಿ 7.30 :** ಭಾವಗೀತೆ ಮತ್ತು ಭಕ್ತಿಗೀತೆ : ಮಧುರ ಕಲಾವೃಂದ, ಹೊಸಹಳ್ಳಿ, ಶಿವಮೊಗ್ಗ.
**8.30 :** ವಚನ ಗಾಯನ : ಪಂ.ನಾಗಭೂಷಣ ಹೆಗಡೆ, ಸಾಗರ

**ನಾಟಕಗಳು ರಾತ್ರಿ 10.00**

**ಹಿರಿಯರ ಮನೆ ಆವರಣ**

ಶ್ರೀ ಗುರು ಸಿದ್ದರಾಮೇಶ್ವರ, ಶ್ರೀ ಶಂಕರೇಶ್ವರ ಕಲಾತಂಡ, ಶ್ರೀ ಕೆರಗೋಡಿ–ರಂಗಾಪುರ ಸುಕ್ಷೇತ್ರ, ತಿಪಟೂರು ತಾ.

**ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ**

**ದಕ್ಷಯಜ್ಞ :** ಶ್ರೀ ವೀರಭದ್ರೇಶ್ವರ ಕಲಾಸಂಘ, ಹಿರಿಯೂರು, ಟಿ.ನರಸೀಪುರ ತಾ.

**ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣ**

**ಶನಿಪ್ರಭಾವ ಅಥವಾ ರಾಜಾ ವಿಕ್ರಮ:** ಶ್ರೀ ಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಮನುಗನಹಳ್ಳಿ, ಹೆಚ್.ಡಿ.ಕೋಟೆ ತಾ.



ಸಾಂಸ್ಕೃತಿಕಮೇಳದಲ್ಲಿ ಜನಮನಸೂರೆಗೊಳಿಸಿದ ನೃತ್ಯಗಾರ್ತಿಯರು



*ಜಾತ್ರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಕೃಷಿಮೇಳವನ್ನು ಉದ್ಘಾಟಿಸಿ ವೀಕ್ಷಿಸುತ್ತಿರುವ ಜಗದ್ಗುರುಗಳವರು, ಜಗದ್ಗುರು ಶ್ರೀ ನಿರ್ಮಲಾನಂದ ಮಹಾಸ್ವಾಮಿಗಳವರು, ಶ್ರೀ ಎಸ್.ಎ. ಚಿನ್ನೇಗೌಡ, ಡಾ. ಮಹದೇವಪ್ಪ, ಶ್ರೀ ಎನ್.ಎಂ. ಶಿವಶಂಕರಪ್ಪ ಮೊದಲಾದವರಿದ್ದಾರೆ.*

# ಜಾತ್ರೆಯಲ್ಲಿ ಕೃಷಿ ಬ್ರಹ್ಮಾಂಡ

ಜಾತ್ರೆಯ ವಿಶೇಷಗಳಲ್ಲಿ ಒಂದಾದ ಕೃಷಿ ಮೇಳವು ಈ ಬಾರಿಯೂ ಸಹ ವಿಭಿನ್ನತೆಯಿಂದ ಜನಾಕರ್ಷಿತವಾಗಿದೆ. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಲಾಗಿರುವ ಕೃಷಿ ಮೇಳದಲ್ಲಿ ದೇಶಿ ವಿದೇಶಿಯ ತರಕಾರಿ ತಳಿಗಳು, ಹೂವು ತಳ್ಳಿಗಳು, ಸಿರಿ ಧ್ಯಾನ್ಯಗಳು, ಕ್ಷೇತ್ರ ಬೆಳೆಗಳು ಆಧುನಿಕ ಕೃಷಿ ಯಂತ್ರೋಪಕರಣಗಳು, ಕೀಟನಾಶಕಗಳು, ಬಿತ್ತನೆ ಬೀಜಗಳು, ರಸಗೊಬ್ಬರಗಳು ಮತ್ತು ಪಶು ಸಂಗೋಪನೆಗೆ ಪ್ರದರ್ಶನ ಆಯೋಜಿಸಲಾಗಿದೆ.

ಕೇವಲ 3 ಎಕರೆ ಪ್ರದೇಶದಲ್ಲಿ ಸುಮಾರು 160 ಬೆಳೆಗಳ 300ಕ್ಕೂ ಅಧಿಕ ತಳಿಗಳು ಬೆಳೆದಿರುವುದು ಕೃಷಿಕರಿಗೆ ಅದರ ಬಗ್ಗೆ ತಿಳಿಯಲು ಅನುಕೂಲವಾಗಿದೆ. ಕಳೆದ 3 ತಿಂಗಳಿಂದ ಸುಮಾರು 20 ಅನುಭವಿ ರೈತರು ಹಾಗೂ 3 ಕೃಷಿ ವಿಜ್ಞಾನಿಗಳ ಪರಿಶ್ರಮಗಳೊಂದಿಗೆ ಸುಮಾರು 8 ಲಕ್ಷ ರೂ.ಗಳ ವೆಚ್ಚದಲ್ಲಿ ಈ ಕೃಷಿ ಮೇಳ ಆಯೋಜಿಸಲಾಗಿದೆ.

ಶ್ರೀಗಳ ಆಶಯದಂತೆ ಕೃಷಿಯಲ್ಲಿರುವ ಯಶಸ್ವಿ ವಿಧಾನಗಳನ್ನು ರೈತರಿಗೆ ತಿಳಿಸುವುದರೊಂದಿಗೆ ಅವರನ್ನು ಹುರಿದುಂಬಿಸುವ ಕಾರ್ಯ ನಡೆಯುತ್ತಿದೆ. ರೈತರಿಗಷ್ಟೆ ಅಲ್ಲದೆ ವಿದ್ಯಾರ್ಥಿಗಳಲ್ಲಿಯೂ ಕೃಷಿಯ ಬಗ್ಗೆ ಆಸಕ್ತಿ ಮೂಡಿಸುವುದು ಮತ್ತು ಕೃಷಿಯಲ್ಲಿರುವ ಯಶಸ್ವಿ ಮಾರ್ಗಗಳನ್ನು ತಿಳಿಸುವುದು ಈ ಪ್ರದರ್ಶನದ ಆಶಯವಾಗಲಿದೆ ಎಂದು ಹಿರಿಯ ವಿಜ್ಞಾನಿಗಳಾದ ಶ್ರೀ ಅರುಣ್ ಬಳಮಟ್ಟಿರವರು ಕೃಷಿ ಮೇಳದ ಬಗ್ಗೆ ಮಾಹಿತಿ ನೀಡಿದರು.

ವರದಿ: ಆರ್. ಅನುಷ, ಹೆಚ್. ಆರ್. ಆದರ್ಶ್

# ಭದ್ರತೆಗೇ ನಮ್ಮ ಮೊದಲ ಆದ್ಯತೆ

ಜಾತ್ರಾ ಮಹೋತ್ಸವದಲ್ಲಿ ಸಾರ್ವಜನಿಕರ ಹಿತಕ್ಕಾಗಿ ಭದ್ರತೆಯನ್ನು ಕಾಪಾಡಲು ಪೊಲೀಸ್ ಇಲಾಖೆಯಿಂದ ವಿವಿಧ ವಿಭಾಗಗಳಿಂದ ಸಿಬ್ಬಂದಿ ವರ್ಗದವರು ಸೇವೆ ಸಲ್ಲಿಸುತ್ತಿದ್ದಾರೆ. 14 ವಿಭಾಗಗಳನ್ನೊಳಗೊಂಡಿರುವ ಇಲಾಖೆಯಲ್ಲಿ ಸುಮಾರು 404 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಚಾಮರಾಜನಗರ, ಹಾಸನ, ಕೊಡಗು ಮತ್ತು ಮೈಸೂರು ಜಿಲ್ಲೆಗಳಿಂದ ಆಗಮಿಸಿದ್ದಾರೆ.

ಪೊಲೀಸ್ ಸಿಬ್ಬಂದಿಗಳ ಮುಖ್ಯಸ್ಥರಾಗಿ ಶ್ರೀ ಎಸ್. ಪಿ. ಅಮಿತ್ ಸಿಂಗ್‌ರವರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ 2 ಡಿಎಸ್‌ಪಿ, 9 ಸಿಪಿಐ, 59 ಎಸ್‌ಐ, 17 ಮಹಿಳಾ ಕಾನ್‌ಸ್ಟೇಬಲ್‌ಗಳು ಕರ್ತವ್ಯನಿರತರಾಗಿದ್ದಾರೆ. ಡಿಎಆರ್ 4 ತುಕಡಿಯೊಂದಿಗೆ ಭದ್ರತಾ ಪಡೆ ನೇಮಿಸಲಾಗಿದೆ. ಗದ್ದುಗೆ ಮುಂಭಾಗ, ದಾಸೋಹ ಸ್ಥಳ, ಕೃಷಿ ಮೇಳ, ವಸ್ತು ಪ್ರದರ್ಶನ, ಕ್ರೀಡಾಕೂಟ, ಸ್ನಾನಘಟ್ಟ, ನಾಟಕ ನಡೆಯುವ ಸ್ಥಳ, ಸಂಚಾರ ನಿಯಂತ್ರಣ ಮತ್ತು ವಾಹನ ನಿಲ್ದಾಣ, ಉಪಹಾಣೆ ಮತ್ತು ರಾತ್ರಿ ಗಸ್ತುವಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ಜಾತ್ರೆಗೆ ಬರುವ ಗಣ್ಯವ್ಯಕ್ತಿಗಳಿಗೆ ಭದ್ರತೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದರಲ್ಲಿ 190 ಮಂದಿ ಹೋಮ್‌ಗಾರ್ಡ್ಸ್ ಸಹ ಕಾರ್ಯ ನಿರ್ವಹಿಸುತ್ತಿದ್ದಾರೆ.

ಹೆಚ್.ಆರ್. ಆದರ್ಶ್, ಆರ್. ಅನುಷ

# ಜನಜಾಗೃತಿ ಮೂಡಿಸುವ ಜಾತ್ರೆ

ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ದೇಸಿ ಆಟಗಳು, ರಂಗೋಲಿ, ಸೋಬಾನೆಪದ ಸ್ಪರ್ಧೆ ಉದ್ಘಾಟನಾ ಸಮಾರಂಭದಲ್ಲಿ ಮಾಜಿ ಸಚಿವರಾದ ಶ್ರೀ ಮಹಿಮಾ ಜೆ. ಪಟೇಲ್‌ರವರು ಬೌದ್ಧಿಕ ಮತ್ತು ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವ ಹಲವು ಕಾರ್ಯಕ್ರಮಗಳ ಸಂಗಮದ ಜಾತ್ರೆ ಇದಾಗಿದ್ದು ಜನರಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಪ್ರಜ್ಞೆಯನ್ನು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದೇ ಈ ಜಾತ್ರೆಯ ವಿಶೇಷವಾಗಿದೆ. ಜನಜಾಗೃತಿಗೆ ಒತ್ತು ಕೊಟ್ಟಿರುವ ಶ್ರೀಗಳು ಜೀವನ ಪ್ರೇರಣೆಗೆ ಶಕ್ತಿದಾಯಕವಾಗಿದ್ದಾರೆ. 'ಸೋಲೆ ಗೆಲುವಿನ ಸೋಪಾನ' ಎಂಬಂತೆ ಆಟಗಳಲ್ಲಿ ಸೋಲು–ಗೆಲುವು ಸಾಮಾನ್ಯವಾಗಿದ್ದು ಇದು ಮಾನವನ ಬುದ್ದಿ ಶಕ್ತಿ ಚುರುಕುಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಗ್ರಾಮೀಣ ಜನರು ಹಡಗಿನಲ್ಲಿ ಕೂರುವುದು ಕನಸಾಗಿರುವುದರಿಂದ ಜಾತ್ರೆಯಲ್ಲಿ ದೋಣಿವಿಹಾರವನ್ನು ಏರ್ಪಡಿಸಿರುವುದು ಜನಸಾಮಾನ್ಯರು ವಿಹರಿಸಲು ಸಾಧ್ಯವಾಗಿದೆ. ದೇಶ–ವಿದೇಶಗಳಿಂದಲೂ ಜನರು ಜಾತ್ರೆಯಲ್ಲಿ ಮೇಳೈಸಿರುವುದು ಜಾತ್ರೆಯ ಮಹಿಮೆಯನ್ನು ಸಾರುತ್ತದೆ. –ಬಿ. ಮಾನಸ



ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಪ್ರಸಾದ ರೂಪದಲ್ಲಿ ಸಿದ್ಧವಾಗಿರುವ ಸಿಹಿ–ಖಾರ ತಿನಿಸುಗಳ ರಾಶಿ

# ಉಚಿತ ಕುಟೀರಗಳು

ಸುತ್ತೂರು ಜಾತ್ರಾ ಮಹೋತ್ಸವಕ್ಕೆ ಬರುವಂತಹ ಭಕ್ತಾದಿಗಳ ಅನುಕೂಲಕ್ಕಾಗಿ "ತಾತ್ಕಾಲಿಕ ಕುಟೀರ" ನಿರ್ಮಿಸಲಾಗಿದೆ. ಈ ಕುಟೀರವು ಒಟ್ಟು 74 ಕೊಠಡಿಗಳನ್ನು ಒಳಗೊಂಡಿದೆ. 1 ಕೊಠಡಿಯಲ್ಲಿ 20 ರಿಂದ 25 ಮಂದಿ ಉಳಿದುಕೊಳ್ಳುವಂತೆ ಸಿದ್ಧಪಡಿಸಲಾಗಿದೆ.



ಸಾಮೂಹಿಕ ವಿವಾಹಕ್ಕೆ ಆಗಮಿಸುವಂತಹ ಜೋಡಿಗಳ ಬಳಗಕ್ಕೆ ಈ ಕುಟೀರದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ವಿದ್ಯುತ್, ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಭದ್ರತಾ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ಕುಟೀರದ ನಿರ್ವಹಣೆಗಾಗಿ ಸಂಸ್ಥೆಯ ಶಿಕ್ಷಕರು ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂ ಸೇವಕರನ್ನು ನಿಯೋಜಿಸಲಾಗಿದೆ. ಜಾತ್ರೆ ಮುಗಿಯುವರೆಗೂ ಭಕ್ತಾದಿಗಳು ಇಲ್ಲಿ ಉಳಿದುಕೊಳ್ಳಲು ಅವಕಾಶವಿರುತ್ತದೆ.

## ಕುಟೀರದ ಬಗ್ಗೆ ಸಾರ್ವಜನಿಕರ ಅಭಿಪ್ರಾಯ



ಕಳೆದ ವರ್ಷಕ್ಕಿಂತ ಈ ವರ್ಷ ನಮಗೆ ಕೊಠಡಿಯ ವ್ಯವಸ್ಥೆ ತುಂಬಾ ಚೆನ್ನಾಗಿದೆ. ನಾವು 10 ಜನ ಧಾರವಾಡದಿಂದ ಬಂದಿದ್ದೇವೆ. ನಮಗೆ ಇಲ್ಲಿನ ಪ್ರಸಾದ, ವಸತಿ ಸೌಲಭ್ಯಗಳು ಸ್ವಚ್ಛತೆಯಿಂದ ಕೂಡಿರುವುದರಿಂದ ಎಲ್ಲರೂ ಸಂತೋಷದಿಂದ ಇದ್ದೀವಿ.

**–ಸಿದ್ದಪ್ಪ,** ಧಾರವಾಡ ಭಜನಾತಂಡ



ನಾನು 5ನೇ ಬಾರಿಗೆ ಜಾತ್ರೆಗೆ ಬಂದಿದ್ದೇನೆ. ನಮಗೆ ಎಲ್ಲಾ ಸೌಲಭ್ಯಗಳನ್ನು ನೀಡಿದ್ದಾರೆ. ಮಹಿಳೆಯರ ಭದ್ರತೆಗೆ ಹೆಚ್ಚು ಆದ್ಯತೆ ನೀಡುತ್ತಿರುವುದು ನಮಗೆ ಸಂತೋಷದ ವಿಷಯ.

**– ಶ್ರೀಮತಿ ದೇವಮ್ಮ**

ಗದಗ ಸೋಬಾನೆ ಪದ ತಂಡ

ಹೆಚ್. ಆರ್. ಆದರ್ಶ್, ಕು. ಮಂದಾರ ಶ್ರೀನಿವಾಸ್




**2 ಫೆಬ್ರವರಿ 2019 ಶನಿವಾರ * ಬೆಳಗ್ಗೆ 10.00* ಸಾಮೂಹಿಕ ವಿವಾಹ**

**ಸಮ್ಮುಖ : ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವಾತ್ಪಾದ ಮಹಾಸ್ವಾಮಿಗಳು,** ಶ್ರೀಪೀಠ, ಉಜ್ಜಯಿನಿ, ಮೌನತಪಸ್ವಿ ನಿ.ಪ್ರಸ್ವ ಶ್ರೀ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು, ಶ್ರೀ ಶಾಂತಲಿಂಗೇಶ್ವರ ಮಠ, ನಿಂಬಾಳ **ಉದ್ಘಾಟನೆ : ಶ್ರೀ ಹೆಚ್.ಡಿ. ಕುಮಾರಸ್ವಾಮಿ,** ಮುಖ್ಯಮಂತ್ರಿಗಳು. **ಅಧ್ಯಕ್ಷತೆ : ಶ್ರೀ ಜಿ.ಟಿ. ದೇವೇಗೌಡ,** ಉನ್ನತ ಶಿಕ್ಷಣ ಸಚಿವರು. **ಮಾಂಗಲ್ಯ ವಿತರಣೆ : ಪದ್ಮಶ್ರೀ ಡಾ. ಶ್ರೀಮತಿ ಸುಧಾಮೂರ್ತಿ,** ಅಧ್ಯಕ್ಷರು, ಇನ್ಫೋಸಿಸ್ ಪ್ರತಿಷ್ಠಾನ. **ಪ್ರತಿಜ್ಞಾ ವಿಧಿ ಬೋಧನೆ : ರಾಜಮಾತೆ ಡಾ. ಶ್ರೀಮತಿ ಪ್ರಮೋದಾದೇವಿ ಒಡೆಯರ್,** ಅರಮನೆ, ಮೈಸೂರು **ಪರಿಕರ ವಿತರಣೆ : ಶ್ರೀ ಸಾ.ರಾ.ಮಹೇಶ್,** ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು. **ಪ್ರಮಾಣಪತ್ರ ವಿತರಣೆ : ಶ್ರೀ ಸಿ.ಎಸ್. ಪುಟ್ಟರಾಜು,** ಸಣ್ಣ ನೀರಾವರಿ ಸಚಿವರು. **ಮುಖ್ಯ ಅತಿಥಿಗಳು : ಡಾ. ಯತೀಂದ್ರ ಸಿದ್ದರಾಮಯ್ಯ,** ವಿಧಾನಸಭಾ ಸದಸ್ಯರು, ವರುಣ, **ಶ್ರೀಮತಿ ಅನಿತಾ ಕುಮಾರಸ್ವಾಮಿ,** ವಿಧಾನಸಭಾ ಸದಸ್ಯರು, ರಾಮನಗರ, **ಶ್ರೀ ಬಿ. ಹರ್ಷವರ್ಧನ್,** ವಿಧಾನಸಭಾ ಸದಸ್ಯರು, ನಂಜನಗೂಡು, **ಶ್ರೀ ಎಂ. ಅಶ್ವಿನ್ ಕುಮಾರ್,** ವಿಧಾನಸಭಾ ಸದಸ್ಯರು, ಟಿ.ನರಸೀಪುರ, **ಶ್ರೀ ಸಿ.ಎಸ್. ನಿರಂಜನ್ ಕುಮಾರ್,** ವಿಧಾನಸಭಾ ಸದಸ್ಯರು, ಗುಂಡ್ಲುಪೇಟೆ, **ಶ್ರೀ ಎಸ್.ವಿ. ಬಾಲಸುಬ್ರಹ್ಮಣ್ಯಮ್,** ಸಿಎಂಡಿ, ಬನ್ನಾರಿ ಶುಗರ್ಸ್ ಲಿ.

**ರಾಜ್ಯಮಟ್ಟದ ಭಜನಾ ಮೇಳ ಉದ್ಘಾಟನೆ : ಸಂಜೆ 4.00**

**ಸಮ್ಮುಖ : ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮಿಗಳು,** ಶ್ರೀ ಕೆರಗೋಡಿ–ರಂಗಾಪುರ ಸುಕ್ಷೇತ್ರ, ತಿಪಟೂರು, ಶ್ರೀ ಚನ್ನಬಸವ ಸ್ವಾಮಿಗಳು, ಶ್ರೀ ಗುರು ಕಂಬಳೀಶ್ವರ ಮಠ, ಮಲ್ಲನಮೂಲೆ ಸುಕ್ಷೇತ್ರ

**ಅಧ್ಯಕ್ಷತೆ : ಡಾ. ಹೆಚ್.ಸಿ. ಮಹದೇವಪ್ಪ,** ಮಾಜಿ ಸಚಿವರು

**ಉದ್ಘಾಟನೆ : ಶ್ರೀ ಎಂ.ಬಿ. ಪಾಟೀಲ್,** ಗೃಹ ಸಚಿವರು

**ಮುಖ್ಯ ಅತಿಥಿಗಳು : ಶ್ರೀ ಎಸ್.ಎ. ರಾಮದಾಸ್,** ಶಾಸಕರು ಹಾಗೂ ಮಾಜಿ ಸಚಿವರು, **ಶ್ರೀ ಪಿ.ಜಿ.ಆರ್. ಸಿಂಧ್ಯಾ,** ಮಾಜಿ ಸಚಿವರು ಹಾಗೂ ಆಯುಕ್ತರು, **ಶ್ರೀ ಅಮರೇಗೌಡ ಎಲ್. ಪಾಟೀಲ್ ಬಯ್ಯಾಪೂರ,** ಶಾಸಕರು ಹಾಗೂ ಮಾಜಿ ಸಚಿವರು, **ಶ್ರೀ ಬಸವರಾಜ ಎಸ್. ಬೊಮ್ಮಾಯಿ,** ಶಾಸಕರು ಹಾಗೂ ಮಾಜಿ ಸಚಿವರು, **ಡಾ. ಜಿ. ಗೋಪಾಲಕೃಷ್ಣನ್,** ಲೋಕಸಭಾ ಸದಸ್ಯರು, ನೀಲಗಿರಿ, **ಶ್ರೀ ಪಿ.ಎಂ. ನರೇಂದ್ರಸ್ವಾಮಿ,** ಮಾಜಿ ಸಚಿವರು, **ಶ್ರೀ ಎನ್. ಚಲುವರಾಯಸ್ವಾಮಿ,** ಮಾಜಿ ಸಚಿವರು, **ಶ್ರೀ ಹೆಚ್.ಡಿ. ಚೌಡಯ್ಯ,** ಮಾಜಿ ಶಾಸಕರು ಹಾಗೂ ಅಧ್ಯಕ್ಷರು, ಪಿಇಎಸ್ ಶಿಕ್ಷಣ ಸಂಸ್ಥೆಗಳು, ಮಂಡ್ಯ, **ಶ್ರೀ ಕೆ.ಬಿ. ಗಣಪತಿ,** ಪ್ರಧಾನ ಸಂಪಾದಕರು, ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರು, **ಶ್ರೀ ದರ್ಶನ್ ತೂಗುದೀಪ,** ಚಲನಚಿತ್ರ ಕಲಾವಿದರು.

## ಸಾಂಸ್ಕೃತಿಕ ಮೇಳದ ಫಲಿತಾಂಶ

(ಎರಡನೇ ಪುಟದಿಂದ)

ಸಮೂಹ ಗಾಯನದಲ್ಲಿ ಸುತ್ತೂರಿನ ಜೆಎಸ್ಎಸ್ ಪ್ರೌಢಶಾಲೆ ಪ್ರಥಮ, ಸರಗೂರಿನ ಜೆಎಸ್ಎಸ್ ಪ್ರೌಢಶಾಲೆ ದ್ವಿತೀಯ, ಮೇಟಿಕುಪ್ಪೆಯ ಜೆಎಸ್ಎಸ್ ಪ್ರೌಢಶಾಲೆ ತೃತೀಯ, ಮನುಗನಹಳ್ಳಿಯ ಜೆಎಸ್ಎಸ್ ಪ್ರೌಢಶಾಲೆ ನಾಲ್ಕನೇಯ, ಕಾಮಗೆರೆಯ ಜೆಎಸ್ಎಸ್ ಪ್ರೌಢಶಾಲೆ ಐದನೇ ಹಾಗೂ ದೇವಲಾಪುರದ ಜೆಎಸ್ಎಸ್ ಪ್ರೌಢಶಾಲೆ 6ನೇ ಬಹುಮಾನವನ್ನು ಪಡೆದುಕೊಂಡರು.

ಸಮೂಹ ಶಾಸ್ತ್ರೀಯ ನೃತ್ಯದಲ್ಲಿ ಸುತ್ತೂರಿನ ಜೆಎಸ್ಎಸ್ ಪ್ರೌಢಶಾಲೆ ಪ್ರಥಮ, ಮಾಲೂರಿನ ಜೆಎಸ್ಎಸ್ ಪ್ರೌಢಶಾಲೆ ದ್ವಿತೀಯ, ಕೆ.ಆರ್. ನಗರದ ಜೆಎಸ್ಎಸ್ ಪ್ರೌಢಶಾಲೆ ತೃತೀಯ, ಹುಲ್ಲಹಳ್ಳಿಯ ಜೆಎಸ್ಎಸ್ ಪ್ರೌಢಶಾಲೆ (ಇಂಗ್ಲಿಷ್ ಮಾಧ್ಯಮ) ನಾಲ್ಕನೇಯ, ಹುಲ್ಲಹಳ್ಳಿ ಜೆಎಸ್ಎಸ್ ಪ್ರೌಢಶಾಲೆ (ಕನ್ನಡ ಮಾಧ್ಯಮ) ಐದನೇ ಹಾಗೂ ನಂಜನಗೂಡಿನ ಜೆಎಸ್ಎಸ್ ಪ್ರೌಢಶಾಲೆ 6ನೇ ಬಹುಮಾನವನ್ನು ಪಡೆದುಕೊಂಡರು.



ಬಣ್ಣ ಬಣ್ಣದ ದೀಪಗಳಿಂದ ಅಲಂಕಾರಗೊಂಡು ಝುಗಮಗಿಸುತ್ತಿರುವ ಶಾಲಾ ಕಟ್ಟಡ

# ಬಹುಮಾನ ಬಾಚಿ ಖುಷಿಪಟ್ಟ ಕೃಷಿಕರು




ಪರಮಪೂಜ್ಯ ಜಗದ್ಗುರುಗಳು ಹಾಗೂ ಮುಖ್ಯಅತಿಥಿಗಳೊಂದಿಗೆ ಸಾಧನೆಗೈದು ಬಹುಮಾನ ಗಳಿಸಿದ ಕೃಷಿಕರು

ಜಾತ್ರಾ ಮಹೋತ್ಸವದ ಅಂಗವಾಗಿ ಸುತ್ತೂರಿನ ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರ ಹಾಗೂ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ದುಗ್ಗಹಟ್ಟಿಯ ಶ್ರೀಮತಿ ಸುಂದರಮ್ಮ ವೀರಭದ್ರಪ್ಪ ಪ್ರತಿಷ್ಠಾನ ಇವರ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಬೆಳೆ ಬೆಳೆದು ಅತ್ಯುತ್ತಮ ಸಾಧನೆಗೈದ ರೈತರಿಗೆ ಕೃಷಿ ಮೇಳದ ಸಭಾಂಗಣದಲ್ಲಿ ಶುಕ್ರವಾರ ಬಹುಮಾನ ವಿತರಣೆ ಮಾಡಲಾಯಿತು.

**ಭತ್ತದ** ಇಳುವರಿಯಲ್ಲಿ ಪ್ರತಿ ಎಕರೆಗೆ 27 ಕ್ವಿಂಟಾಲ್ ಭತ್ತದ ರಾಶಿಯನ್ನು ಬೆಳೆದ ತುಮ್ಮನೇರಳೆಯ ಶ್ರೀ ಟಿ.ಎನ್. ರಾಜೇಂದ್ರಕುಮಾರ್‌ರವರು ಪ್ರಥಮ ಬಹುಮಾನ ಪಡೆದರೆ, ಎಕರೆಗೆ 23 ಕ್ವಿಂಟಾಲ್ ಭತ್ತವನ್ನು ಬೆಳೆದ ಬಸವನಪುರದ ಶ್ರೀ ಮಲ್ಲಾರಾಧ್ಯ ಬಿನ್ ನಂಜುಂಡಾರಾಧ್ಯರವರು ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ.

**ಬಾಳೆ** ಬೆಳೆಯನ್ನು ಪ್ರತಿ ಎಕರೆಗೆ 28 ಟನ್ ಬೆಳೆದ ಯಳಂದೂರು ತಾಲ್ಲೂಕಿನ ಶಿವಕಳ್ಳಿಯ ಶ್ರೀ ಕೆ. ಶಿವಶಂಕರ್ ಬಿನ್ ಲೇಟ್ ಕೆಂಪಲಿಂಗಯ್ಯನವರು ಪ್ರಥಮ ಬಹುಮಾನ ಪಡೆದರೆ, ಯಳಂದೂರು ತಾಲ್ಲೂಕಿನ ಅಲಕೆರೆ ಅಗ್ರಹಾರದ ಶ್ರೀ ಮಹದೇವಯ್ಯನವರು ಎಕರೆಗೆ 23 ಟನ್ ಬೆಳೆದು ದ್ವಿತೀಯ ಬಹುಮಾನ ಪಡೆದರು.

**ಟೊಮ್ಯಾಟೊ** ಬೆಳೆಯನ್ನು ಪ್ರತಿ ಎಕರೆಗೆ 23 ಟನ್ ಬೆಳೆದು ಗುಡ್ಡೆ ಹಾಕುವ ಮೂಲಕ ಚಾಮರಾಜನಗರ ತಾಲ್ಲೂಕಿನ ಕಲ್ಪುರದ ಶ್ರೀ ರವಿಕುಮಾರ್ ಬಿನ್ ಲೇಟ್ ಗುರುಸ್ವಾಮಪ್ಪನವರು ಪ್ರಥಮ ಬಹುಮಾನವನ್ನು ಪಡೆದರೆ, ಎಕರೆಗೆ 20 ಟನ್ ಬೆಳೆದ ಚಾಮರಾಜನಗರ ತಾಲ್ಲೂಕಿನ ಬೇವಿನತಾಳಪುರದ ಶ್ರೀ ಶಿವಣ್ಣ ಬಿನ್ ಬಸವಶೆಟ್ಟಿರವರು ದ್ವಿತೀಯ ಬಹುಮಾನವನ್ನು ಪಡೆದರು.

**ಮುಸುಕಿನಜೋಳದ** ಬೆಳೆಯನ್ನು ಪ್ರತಿ ಎಕರೆಗೆ 26 ಕ್ವಿಂಟಾಲ್ ಬೆಳೆದ ಕೊಳ್ಳೇಗಾಲ ತಾಲ್ಲೂಕಿನ ಕಣ್ಣೂರು ಗ್ರಾಮದ ಶ್ರೀ ಮಹೇಂದ್ರಸ್ವಾಮಿ ಬಿನ್ ಮಹಂತದೇವರುರವರು ಪ್ರಥಮ ಬಹುಮಾನವನ್ನು ಗಳಿಸಿದರೆ, ಪ್ರತಿ ಎಕರೆಗೆ 20 ಕ್ವಿಂಟಾಲ್ ಬೆಳೆದ ಕೊಳ್ಳೇಗಾಲ ತಾಲ್ಲೂಕಿನ ನಾಗನತ್ತ ಗ್ರಾಮದ ಶ್ರೀ ಪ್ರಭುಸ್ವಾಮಿ ಬಿನ್ ಜಡಿಯಪ್ಪನವರು ದ್ವಿತೀಯ ಬಹುಮಾನವನ್ನು ಗಳಿಸಿದರು.

**ಪೋಲ್ ಬೀನ್ಸ್** ಇಳುವರಿಯನ್ನು ಎಕರೆಗೆ 9 ಟನ್ ಬೆಳೆಯುವ ಮೂಲಕ ಗುಂಡ್ಲುಪೇಟೆ ತಾಲ್ಲೂಕಿನ ಬಲಚವಾಡಿಯ ಶ್ರೀ ಮಲ್ಲಿಕಾರ್ಜುನಪ್ಪ ಬಿನ್ ಲೇಟ್ ಮಲ್ಲಪ್ಪನವರು ಪ್ರಥಮ ಬಹುಮಾನ ಪಡೆದರೆ, ಎಕರೆಗೆ 8 ಟನ್ ಬೆಳೆದು ದ್ವಿತೀಯ ಬಹುಮಾನವನ್ನು ಇದೇ ಗ್ರಾಮದ ಶ್ರೀ ಸ್ವಾಮಿ ಬಿನ್ ಗುರುನಂಜಪ್ಪನವರು ಪಡೆದರು.




ಶುಕ್ರವಾರ ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳವನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಚಿತ್ರದಲ್ಲಿ ಡಾ. ಮಹದೇವಪ್ಪ, ಶ್ರೀ ವಾಸು, ಶ್ರೀ ಎಸ್.ಎ. ಚಿನ್ನೇಗೌಡ, ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು, ಶ್ರೀ ಎನ್.ಎಂ. ಶಿವಶಂಕರಪ್ಪ, ಡಾ. ಅರುಣ್ ಬಳಮಟ್ಟಿ ಹಾಗೂ ಮೊದಲಾದವರಿದ್ದಾರೆ.

## ಸ್ಫೂರ್ತಿಯ ತಾಣ ನೋಡಿದವನೇ ಜಾಣ

### ಶ್ರೀ ಹೆಚ್.ಎಸ್. ಸೋಮಶೇಖರ್

"ವಸ್ತುಪ್ರದರ್ಶನದಲ್ಲಿರುವ ಕೃಷಿ ಮೇಳಕ್ಕೆ ಭೇಟಿಕೊಟ್ಟ ಕೂಡಲೇ ನನ್ನ ಮನಸ್ಸು ಹೂವಿನಂತೆ ಅರಳಿತು" ಎಂದು ಬೆಂಗಳೂರಿನ ವರ್ತಕರಾದ ಶ್ರೀ ಹೆಚ್.ಎಸ್. ಸೋಮಶೇಖರ್‌ರವರು ಹೇಳಿದರು. ವಸ್ತುಪ್ರದರ್ಶನ, ಕೃಷಿಮೇಳ ಮತ್ತು ಸಾಂಸ್ಕೃತಿಕ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಜಾತ್ರಾ ಮಹೋತ್ಸವದಲ್ಲಿನ ಕೃಷಿ ಮೇಳವು ಅನಕ್ಷರಸ್ಥ ರೈತರಿಗೆ ಕೃಷಿಯ ಬಗ್ಗೆ ಮಾಹಿತಿಯನ್ನು ನೀಡುತ್ತಿರುವುದರಿಂದ ರೈತರಿಗೆ ಬಹಳ ಉಪಯೋಗವಾಗುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಕೃಷಿಯ ಬಗ್ಗೆ ಒಲವು ಕಡಿಮೆಯಾಗುತ್ತಿದೆ. ಈ ಸಂದರ್ಭದಲ್ಲಿ ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳವನ್ನು ಆಯೋಜಿಸಿರುವುದು ಅರ್ಥಪೂರ್ಣವಾಗಿದೆ ಎಂದು ಹೇಳಿದರು. **–ಹರ್ಷಿತಾ ಎಂ.**

**ಇಂದು ರಾಜ್ಯಮಟ್ಟದ ಭಜನಾ ಮೇಳ ಉದ್ಘಾಟನೆ**

**ಛಾಯಾ ಚಿತ್ರಗಳು**

**ವಾಟಾಳ್ ಆನಂದ್**
**ಬಿ.ಎನ್. ನಿಜಲಿಂಗಪ್ಪ**
**ಜಯಶಂಕರ್**
**ಮಂಜುನಾಥ್**
**ಶಶಾಂಕ್**
**ನಂಜುಂಡನಾಯ್ಕ**

## ನಮ್ಮ ಸಂಸ್ಕೃತಿಯನ್ನು ಉಳಿಸೋಣ



ನನಗೂ ಮತ್ತು ಸುತ್ತೂರು ಮಠಕ್ಕೂ 40 ವರ್ಷಗಳ ಬಾಂಧವ್ಯವಿದೆ. ನಾನು ಯಾವುದೇ ಒಳ್ಳೆಯ ಕೆಲಸವನ್ನು ಮಾಡುವುದಕ್ಕೂ ಮೊದಲು ಶ್ರೀಗಳ ಆಶೀರ್ವಾದ ಪಡೆದುಕೊಂಡು ಹೋಗುತ್ತೇನೆ. ಹಾಗೆಯೇ ಸ್ವಾಮೀಜಿಯವರು ಸಹ ನನ್ನನ್ನು ಬಹಳ ಸೌಜನ್ಯದಿಂದ ವಿಚಾರಿಸಿಕೊಳ್ಳುತ್ತಾರೆ ಎಂದು ಬೆಂಗಳೂರಿನ ಎಫ್‌ಕೆಸಿಸಿಐ ಅಧ್ಯಕ್ಷರಾದ **ಶ್ರೀ ಸುಧಾಕರ್ ಎಸ್. ಶೆಟ್ಟಿಯವರು** ಹೇಳಿದರು. ದೇಸಿ ಆಟಗಳು, ದೋಣಿವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಅವರು ಶ್ರೀ ಸಿದ್ಧಗಂಗಾ ಮಠ ಮತ್ತು ಸುತ್ತೂರು ಶ್ರೀಕ್ಷೇತ್ರ ನಮ್ಮದೆಂಬ ಭಾವನೆಯನ್ನು ಮೂಡಿಸುತ್ತದೆ. ಈಗಿನ ಕಾಲದಲ್ಲಿ ನಾವುಗಳು ದೇಸಿ ಆಟಗಳನ್ನು ಮರೆತುಬಿಟ್ಟಿದ್ದೇವೆ. ಈ ಯುಗ ಬಹಳ ಬದಲಾಗಿದೆ ಹಾಗಾಗಿ ಸುತ್ತೂರು ಜಾತ್ರೆಯಲ್ಲಿ ದೇಸಿ ಆಟಗಳ ಸ್ಪರ್ಧೆ ಏರ್ಪಡಿಸುವುದು ಬಹಳ ಹೆಮ್ಮೆಯ ವಿಷಯವಾಗಿದೆ. ರೈತರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ ನಗರಗಳಿಗೆ ಆಕರ್ಷಿತರಾಗುತ್ತಿದ್ದಾರೆ ಆದ್ದರಿಂದ ನಾವುಗಳು ಹಳ್ಳಿಯನ್ನು ಮತ್ತು ನಮ್ಮ ಸಂಸ್ಕೃತಿಯನ್ನು ಉಳಿಸೋಣ ಎಂದು ಹೇಳಿದರು.

**–ಸುನೀತಾ ಸಿ.ಕೆ**

## ಬೇರಿನಂತೆ ಮರ

**1ನೇ ಪುಟದಿಂದ**

ಅಕ್ಷರ ದಾಸೋಹವನ್ನು ನಿರಂತರವಾಗಿ ಮಾಡುತ್ತಾ ಬರುತ್ತಿರುವುದು ಶ್ಲಾಘನೀಯ, ಜಾತ್ರೆಯಲ್ಲಿ ದೇಸಿ ಸಂಸ್ಕೃತಿಗೆ ಆದ್ಯತೆ ನೀಡಲಾಗಿದೆ. "ಬೇರು ಚೆನ್ನಾಗಿದ್ದರೆ ಮರವೂ ಚೆನ್ನಾಗಿರುತ್ತದೆ. ಆದ್ದರಿಂದ ನಮ್ಮ ದೇಸಿ ಕಲೆಯನ್ನು ಉಳಿಸಿ ಬೆಳೆಸಬೇಕು ಈ ಜಾತ್ರೆಯಲ್ಲಿ ರೈತರಿಗೆ ಬಹಳ ಉಪಯೋಗವಾಗುವಂತಹ ಕೃಷಿ ಮೇಳವನ್ನು ಆಯೋಜಿಸಿರುವುದು ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ನುಡಿದರು. **– ಸ್ವಾತಿ ಯು**

# ಮಾನವನ ಪರಿಪೂರ್ಣ ಜೀವನಕ್ಕೆ ಶಿಕ್ಷಣ ಅಗತ್ಯ

**ಶ್ರೀ ಎಂ. ಸಿ. ಮನಗೂಳಿ**

ಪ್ರತಿ ಮನೆಗೊಂದು ಗುರು ಬೇಕು, ಪ್ರತಿ ಊರಿಗೊಂದು ಮಠ ಬೇಕು, ವಿಭೂತಿ, ರುದ್ರಾಕ್ಷಿ, ಲಿಂಗಪೂಜೆಗಳಷ್ಟೆ ಮನುಷ್ಯನನ್ನು ಪರಿಪೂರ್ಣರನ್ನಾಗಿಸುವುದಿಲ್ಲ. ವ್ಯಕ್ತಿಯ ಸಂತೋಷದ ಜೀವನಕ್ಕೆ ಗುರುಕೃಪೆ ಬೇಕು ಎಂದು ತೋಟಗಾರಿಕೆ ಸಚಿವರಾದ ಶ್ರೀ ಎಂ. ಸಿ. ಮನಗೂಳಿರವರು ಹೇಳಿದರು.

ದೋಣಿವಿಹಾರ, ರಂಗೋಲಿ ಮತ್ತು ಸೋಬಾನೆ ಪದ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು ಸತ್ಯ, ನ್ಯಾಯ, ನೀತಿ–ಧರ್ಮ ಇದ್ದರೆ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿ ಸಾಧ್ಯ. ಸುತ್ತೂರು ಶ್ರೀಕ್ಷೇತ್ರವು ವಿದ್ಯಾ ದಾಸೋಹದಂತಹ ಪುಣ್ಯ ಕಾರ್ಯವನ್ನು ಮಾಡುತ್ತಿದೆ ಎಂದರು.

ನಾವು ಮನುಷ್ಯರಾಗಿ ಬದುಕಲು ಶಿಕ್ಷಣ ಅಗತ್ಯ, ನಮ್ಮ ಬದುಕಿಗೆ ಪೂರಕವಾದ ಶಿಕ್ಷಣ ನೀಡಿ ನಾವು ಮಾನವರಾಗಿ ಬದುಕಲು ನಾಡಿನ ಮಠಗಳು ದಾರಿ ಮಾಡಿಕೊಡುತ್ತಿವೆ ಎಂದು ಅಭಿಪ್ರಾಯಪಟ್ಟರು.

– ಆದರ್ಶ್ ಹೆಚ್. ಆರ್.




ಆದಿಜಗದ್ಗುರುಗಳ ಉತ್ಸವಮೂರ್ತಿಯನ್ನು ಶುಕ್ರವಾರ ಸಂಜೆ ಶ್ರೀಮಠದಿಂದ ಕರ್ತೃಗದ್ದುಗೆಗೆ ಬಿಜಯಂಗೈಸಲಾಯಿತು.

# ನಾಟಕ ಹತ್ತಾರು... ಮಿನಿ ಕರ್ನಾಟಕ ಸುತ್ತೂರು

ಮೈಸೂರಿನ ನಾದ ಸಂಗಮ ಕಲಾ ಬಳಗದ ಕಲಾವಿದರು ಗುರುವಾರ ರಾತ್ರಿ ಅಭಿನಯಿಸಿದ "ಸತ್ಯ ಹರಿಶ್ಚಂದ್ರ" ಎಂಬ ಪೌರಾಣಿಕ ನಾಟಕ ಯಶಸ್ವಿಯಾಗಿ ಪ್ರದರ್ಶನಗೊಂಡಿತು. ಬಿನಕನಹಳ್ಳಿ ಶ್ರೀಮಠದ ಶ್ರೀ ಮಹದೇವಸ್ವಾಮಿಗಳವರು ಮತ್ತು ಸರಗೂರು ಶ್ರೀಮಠದ ಶ್ರೀ ಬಸವ ರಾಜೇಂದ್ರ ಸ್ವಾಮಿಗಳವರು ನಾಟಕವನ್ನು ಉದ್ಘಾಟಿಸಿ ಮಾತನಾಡುತ್ತಾ ಇಂದಿನ ಜನಮಾನಸದಲ್ಲಿ ನಾಟಕಗಳ ಪ್ರದರ್ಶನ ಕಡಿಮೆಯಾಗುತ್ತಿದ್ದು, ಸುತ್ತೂರು ಶ್ರೀಗಳು ಇದರ ಕಲೆಯನ್ನು ಉಳಿಸಲು ಇಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಹೇಳುತ್ತಾ, ಸಿದ್ಧಗಂಗಾ ಶ್ರೀಗಳ ಪುಣ್ಯಸಂಕಲ್ಪ ದಿವಸದಂದು "ಸತ್ಯ ಹರಿಶ್ಚಂದ್ರ" ನಾಟಕವು ಪ್ರದರ್ಶನಗೊಳ್ಳುತ್ತಿರುವುದು ಸಂತಸದ ವಿಷಯವೆಂದು ತಿಳಿಸಿದರು. ಈ ನಾಟಕವು ಕಲಾಭಿಮಾನಿಗಳ ಮನಸೂರೆಗೊಂಡಿತು.





ಸತ್ಯ ಹರಿಶ್ಚಂದ್ರ ನಾಟಕದ ದೃಶ್ಯಗಳು

ಶನಿವಾರ ರಾತ್ರಿ 10.00ಕ್ಕೆ ಹಿರಿಯರ ಮನೆ ಆವರಣದಲ್ಲಿ ಶ್ರೀ ಗುರು ಸಿದ್ಧರಾಮೇಶ್ವರ, ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದಲ್ಲಿ ದಕ್ಷಯಜ್ಞ, ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣದಲ್ಲಿ ಶನಿಪ್ರಭಾವ ಅಥವಾ ರಾಜಾ ವಿಕ್ರಮ ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳಲಿವೆ.

ಭಾನುವಾರ ರಾತ್ರಿ 10.00ಕ್ಕೆ ಹಿರಿಯರ ಮನೆ ಆವರಣದಲ್ಲಿ ಭಕ್ತ ಪ್ರಹ್ಲಾದ, ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದಲ್ಲಿ ಶಿವಕುಮಾರ ಅಥವಾ ಶೂರಪದ್ಮನವಧೆ, ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣದಲ್ಲಿ ದಕ್ಷಯಜ್ಞ ಅಥವಾ ಭೃಗುಮುನಿಯ ಗರ್ವಭಂಗ ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳಲಿವೆ.

ಸೋಮವಾರ ರಾತ್ರಿ 10.00ಕ್ಕೆ ಹಿರಿಯರ ಮನೆ ಆವರಣದಲ್ಲಿ ಮೋಹಿನಿ ಭಸ್ಮಾಸುರ, ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದಲ್ಲಿ ದಾನಶೂರ ಕರ್ಣ, ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣದಲ್ಲಿ ದಕ್ಷಯಜ್ಞ ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳಲಿವೆ.

ಮಂಗಳವಾರ ರಾತ್ರಿ 10.00ಕ್ಕೆ ಹಿರಿಯರ ಮನೆ ಆವರಣದಲ್ಲಿ ವಿಶ್ವಗುರು ಬಸವಣ್ಣ, ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪದಲ್ಲಿ ಶ್ರೀ ಕೃಷಸಂಧಾನ, ಸ.ಹಿ.ಪ್ರಾ.ಶಾಲೆ ಪಕ್ಕದ ಆವರಣದಲ್ಲಿ ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕಗಳು ಪ್ರದರ್ಶನಗೊಳ್ಳಲಿವೆ.

Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore - 570 015